# ಮಾಸ್ಟರ್ ಇ.ಕೆ.

ಜ್ಞಾನ, ವೈದ್ಯ ಮತ್ತು ಪ್ರೀತಿಯ ಮೂಲಕ ಜೀವನಗಳಲ್ಲಿ ಪ್ರೇರಣೆಯನ್ನು ತುಂಬಿದ ಯೋಗಿ.



# ಮುನ್ನುಡಿ

ಆಟಿಕೆಗಳು, ಬಣ್ಣಗಳು, ಕಥೆಗಳು ಮತ್ತು ಪುಸ್ತಕಗಳು ಬಾಲ್ಯದೊಂದಿಗೆ ಬೇರ್ಪಡಿಸಲಾಗದ ಸಂಬಂಧವನ್ನು ಹೊಂದಿವೆ. ಅವರು ಮೊಳಕೆಯೊಡೆಯುವ ಮನಸ್ಸುಗಳಿಗೆ, ಕಲ್ಪನೆಗಳು, ಕನಸುಗಳು ಮತ್ತು ಸೃಜನಶೀಲತೆಯನ್ನು ಪರಿಚಯಿಸುತ್ತಾರೆ. ನೈತಿಕ ಕಥೆಗಳು, ಐತಿಹಾಸಿಕ ಕಥೆಗಳು, ಮೌಲ್ಯವನ್ನು ನೀಡುವ ಕಥೆಗಳು, ಪಾತ್ರ ನಿರ್ಮಾಣದ ಕಥೆಗಳು, ರಾಮಾಯಣ, ಭಾರತ ಮತ್ತು ಪುರಾಣಗಳ ಕಥೆಗಳು ಅವರ ಜೀವನದಲ್ಲಿ ಅಳಿಸಲಾಗದ ಗುರುತುಗಳನ್ನು ಬಿಡುತ್ತವೆ.

ಚಂದಮಾಮ, ಅಮರ ಚಿತ್ರ ಕಥೆ ಪುಸ್ತಕಗಳು ಇತ್ಯಾದಿಗಳು ತಲೆಮಾರುಗಳಿಂದ ಮಕ್ಕಳನ್ನು ಪ್ರೇರೇಪಿಸುತ್ತಿವೆ ಮತ್ತು ಪುಳಕಿತಗೊಳಿಸುತ್ತಿವೆ. ಇದೇ ವಿಭಾಗದಲ್ಲಿ ಮಾಸ್ಟರ್ ಸಿ.ವಿ.ವಿ., ಮಾಸ್ಟರ್ ಎಂ.ಎನ್. ಮಾಸ್ಟರ್ ಇ.ಕೆ. ಅಂತಹ ಮಹಾತ್ಮರ ಜೀವನವನ್ನು ಕಥೆಗಳ ಪುಸ್ತಕದ ರೂಪದಲ್ಲಿ ಪರಿಚಯಿಸುವ ವಿನಮ್ರ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಜೀವನಚರಿತ್ರೆಗಳನ್ನು ಅವರ ಜೀವನದ ಘಟನೆಗಳನ್ನು ವಿವರಿಸಲು ವಿನ್ಯಾಸಗೊಳಿಸಲಾಗಿದೆ, ಆದರೆ ಅವರ ಬೋಧನೆಗಳಿಗೆ ಪ್ರಾಯೋಗಿಕ ವಿವರಗಳನ್ನು ಸೇರಿಸಲು ಮತ್ತು ಅವರ ದೈವಿಕ ಜೀವನವನ್ನು ಹೇಗೆ ಅನುಸರಿಸಬಹುದು ಎಂಬುದನ್ನು ನಮಗೆ ತೋರಿಸುತ್ತದೆ.

ಈ ಜೀವನಚರಿತ್ರೆಯನ್ನು ಮಕ್ಕಳಿಗೆ ಸುಲಭವಾಗಿ ಅರ್ಥಮಾಡಿಕೊಳ್ಳಲು ಸೃಜನಶೀಲ ಸ್ವಾತಂತ್ರ್ಯವನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಈ ಪ್ರಯತ್ನವು ಮಕ್ಕಳ ತಿಳುವಳಿಕೆಗೆ ಹೆಚ್ಚಿನ ಕೊಡುಗೆ ನೀಡುತ್ತದೆ ಎಂದು ನಾವು ನಂಬುತ್ತೇವೆ.

ಈ ಪುಸ್ತಕದ ವಿಷಯ ಸಂಕಲನ, ಅನುವಾದ, ಪ್ರೂಫ್ ರೀಡಿಂಗ್ ಕಾರ್ಯಗಳಲ್ಲಿ ಮತ್ತು ಪ್ರಚುರಣಕ್ಕೆ ಆರ್ಥಿಕ ಸಹಾಯ ಮಾಡಿದ ಎಲ್ಲಾ ಸಾಧಕರಿಗೆ ನಮ್ಮ ತುಂಬೆದೆಯ ಕೃತಜತೆಗಳು.

**ಡಾ.ಕೆ.ಪಾರ್ವತಿಕುಮಾರ್ ಅವರ ಕೃತಿಗಳು ಮತ್ತು ಭವಿಷ್ಯವಾಣಿಗಳನ್ನು ಆಧರಿಸಿ ನಾವು ಈ ಪುಸ್ತಕವನ್ನು ಸಂಕಲನ ಮಾಡಿದ್ದೇವೆ.**

ವಸ್ತು ಸಂಗ್ರಹಕ್ಕಾಗಿ ಪರಿಶೀಲಿಸಲಾದ ಇತರ ಪಠ್ಯಗಳು:

1. ಮಾಸ್ಟರ್ ಸಿ.ವಿ.ವಿ. - ಬರೆದವರು: ಮಾಸ್ಟರ್ ಇ.ಕೆ
2. ಪ್ರಾಕ್ಪಶ್ಚಿಮುಲು - ಬರೆದವರು: ಮಾಸ್ಟರ್ ಇ.ಕೆ
3. ಪ್ರೇಮ ಪತ್ರಗಳು - ಬರೆದವರು: ಮಾಸ್ಟರ್ ಇ.ಕೆ
4. ಮಾಸ್ಟರ್ ಇ.ಕೆ. ಜೀವನ ಚರಿತ್ರೆ - ಬರಹ: ಶ್ರೀ ಸಿ.ಎಚ್. ಸತ್ಯದೇವ್
5. ಅನಂತಪುತ್ರನ ಅನಂತ ಮಹಿಮೆ - ಬರೆದವರು: ಶ್ರೀ ಯು.ವಿ.ಎ.ಎನ್. ರಾಜ

**ವರ್ಣಚಿತ್ರಕಾರ**

ಆರ್ಟಿಸ್ಟ್ ವಸು ಚೆನ್ನೂಪಲ್ಲಿ

**ಬೆಲೆ:**

ಅಮೂಲ್ಯ

**ಪ್ರಕಾಶಕರು**

ದ ವರ್ಲ್ಡ್ ಟೀಚರ್ ಟ್ರಸ್ಟ್ - ಗ್ಲೋಬಲ್, ಸ್ವಿಟ್ಜರ್ಲ್ಯಾಂಡ್

**ಸರ್ವ ಹಕ್ಕುಗಳು.**

© 2025, ದ ವರ್ಲ್ಡ್ ಟೀಚರ್ ಟ್ರಸ್ಟ್ - ಗ್ಲೋಬಲ್, ಸ್ವಿಟ್ಜರ್ಲ್ಯಾಂಡ್

**ಗಮನಿಸು::**
ಕೀರ್ತಿಶೇಷರಾದ ಕಲಾವಿದ ಕರುಣಾಕರ್ ಅವರಿಗೆ ನಿವಾಳಿಯಾಗಿ ಅವರು ಬಿಡಿಸಿದ ಚಿತ್ರವನ್ನು ಯಥಾತಥವಾಗಿ 1ನೇ ಪುಟದ 3ನೇ ಫ್ರೇಮ್‌ಗಾಗಿ ಪುಸ್ತಕದಲ್ಲಿ ಸೇರಿಸಲಾಗಿದೆ


ಅನೇಕ ಸತ್ಯಾನ್ವೇಷಕರು ಮತ್ತು ಅನುಯಾಯಿಗಳು ಪ್ರೀತಿಯಿಂದ ಮಾಸ್ಟರ್ ಇ.ಕೆ. ಎಂದು ಕರೆಯುವ ಶ್ರೀ ಕೃಷ್ಣಮಾಚಾರ್ಯರು, ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಬಾಪಟ್ಲದಲ್ಲಿ, 1926 ಆಗಸ್ಟ್ 11ರಂದು ಶ್ರೀ ಎಕ್ಕಿರಾಲ ಅನಂತಾಚಾರ್ಯ ಮತ್ತು ಶ್ರೀಮತಿ ಬುಚ್ಚಮ್ಮ ದಂಪತಿಗಳಿಗೆ ಜನಿಸಿದರು. ಶ್ರೀ ಅನಂತಾಚಾರ್ಯರು ವೇದ, ವೇದಾಂಗ ಮತ್ತು ಆಯುರ್ವೇದಗಳಲ್ಲಿ ತಜ್ಞರಾದ ಋಷಿಯಾಗಿದ್ದರು. ಅವರು ಶ್ರೀಕೃಷ್ಣನ ಭಕ್ತರಾಗಿದ್ದರು. ಅನಂತಾಚಾರ್ಯರ ನಾಲ್ಕು ಮಕ್ಕಳಲ್ಲಿ ಹಿರಿಯಮಗ ಕೃಷ್ಣಮಾಚಾರ್ಯರು.





ಮಕ್ಕಳನ್ನು ಶಾಲೆಗೆ ಕಳುಹಿಸದೆ, ಅವರ ತಂದೆ ಅನಂತಾಚಾರ್ಯರು ಮನೆಯಲ್ಲಿಯೇ ಶಿಕ್ಷಣವನ್ನು ನೀಡಿದರು. ಬಾಲ್ಯದಲ್ಲಿಯೇ ಪಾಠ್ಯಪುಸ್ತಕಗಳೊಂದಿಗೆ ಆಂಗ್ಲ ಮತ್ತು ಸಂಸ್ಕೃತ ಭಾಷೆಗಳನ್ನೂ ಅಧ್ಯಯನ ಮಾಡಿಸಿದರು.



ಇ.ಕೆ.ಯವರು ತಮ್ಮ ತಂದೆಯಿಂದ ವೇದಗಳು, ಉಪನಿಷತ್‌ಗಳು ಹಾಗೂ ಸನಾತನ ಧರ್ಮಕ್ಕೆ ಸಂಬಂಧಿಸಿದ ಸಮಸ್ತ ಜ್ಞಾನವನ್ನು ಪಡೆದರು.




ಕೃಷ್ಣಮಾಚಾರ್ಯರಿಗೆ ಏಳು ವರ್ಷದ ವಯಸ್ಸಿದ್ದಾಗ, ಒಂದು ದಿನ ಬ್ರಹ್ಮ ಸಮಾಜದವರು ಡಾ. ಅನಂತಾಚಾರ್ಯರನ್ನು ಭೇಟಿ ಮಾಡಲು ಬಂದರು.
ಚರ್ಚೆಗಳ ನಂತರ, ಅವರಿಗೆ ಗ್ರಾಮವನ್ನು ತೋರಿಸಲು ತಂದೆ ಆದೇಶಿಸಿದಾಗ, ಕೃಷ್ಣಮಾಚಾರ್ಯರು ಗ್ರಾಮದ ಪ್ರಮುಖ ಸ್ಥಳಗಳನ್ನು ತೋರಿಸಿ, ಸಮೀಪದ ದೇವಾಲಯಕ್ಕೆ ಅವರನ್ನು ಆಹ್ವಾನಿಸಿದರು.
ವಿಗ್ರಹಾರಾಧನೆಗೆ ವಿರೋಧಿಗಳಾಗಿರುವು ದರಿಂದ, ಅವರು ದೇಗುಲದ ಒಳಗೆ ಹೋಗಲು ನಿರಾಕರಿಸಿದರು.
ಭಗವಂತನು ಸರ್ವಾಂತರ್ಯಾಮಿ. ವಿಶೇಷವಾಗಿ ದೇವಾಲಯಕ್ಕೆ ಹೋಗಿ ದರ್ಶನ ಮಾಡಬೇಕಾದ ಅಗತ್ಯವಿಲ್ಲ.
ಎಲ್ಲೆಡೆ ವ್ಯಾಪಿಸಿರುವ ಭಗವಂತನು ಈ ದೇಗುಲದಲ್ಲೇ ಇರುವುದಿಲ್ಲವೆ?
ಅಂತಹ ಮಹಾ ಸಾಧಕರು ಆ ಬಾಲಕನ ಉತ್ತರವನ್ನು ಕೇಳಿ ಆಶ್ಚರ್ಯಚಕಿತರಾದರು.
ಮನೆಗೆ ಮರಳಿ ಬಂದ ನಂತರ, ಅವರು ಶ್ರೀ ಅನಂತಾಚಾರ್ಯರೊಂದಿಗೆ
ನಿಮ್ಮ ಮಗನಲ್ಲಿ ಒಂದು ಮಹತ್ತರವಾದ ಬೆಳಕು ಇದೆ


ಕೃಷ್ಣಮಾಚಾರ್ಯರು ತಮ್ಮ ಹದಿನೈದನೇ ವರ್ಷದ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರು. ಮೂವರು ಸಹೋದರರನ್ನು ನೋಡಿಕೊಳ್ಳುವಾಗ, ತಾಯಿಯ ಪಾತ್ರವನ್ನು ಅವರು ಪೋಷಿಸಿದರು.
ಶ್ರೀ ಅನಂತಾಚಾರ್ಯರು ಪ್ರಸಿದ್ಧ ಆಯುರ್ವೇದ ವೈದ್ಯರು. ಕೃಷ್ಣಮಾಚಾರ್ಯರು ತಮ್ಮ ತಂದೆಯಿಂದ ಆಯುರ್ವೇದ ಮತ್ತು ವೈದ್ಯ ಸೇವೆ ಮಾಡುವುದು ಕಲಿತರು.
ಅಂದಿನ ಕಾಲದಲ್ಲಿ ವಿಶ್ವನಾಥ ಸತ್ಯನಾರಾಯಣ ರವರು ಮಹಾಕವಿ ಆಗಿದ್ದರು. ಕೃಷ್ಣಮಾಚಾರ್ಯರು ಋತುಗಳ ಮೇಲೆ ಬರೆದ ಕವಿತ್ವವನ್ನು ಅವರಿಗೆ ತೋರಿಸಿದಾಗ
ಈ ಕವಿತ್ವದ ಭಾವನೆಗಳು ಮತ್ತು ಸ್ಪಷ್ಟತೆ ಚಾಲಾ ಚೆನ್ನಾಗಿವೆ ಅನಂತಾ! ನಿಮ್ಮ ಕೃಷ್ಣನು ಕಾರಣಜನ್ಮನು. ಅವನ ಪ್ರತಿಭೆ ಬಹುಮುಖವಾಗಿರುತ್ತದೆ.
ಮಾಸ್ಟರ್ ಇಕೆ ಅವರು ತಮ್ಮ ಏಳನೇ ವರ್ಷದ ವಯಸ್ಸಿನಿಂದ ಗಾಯತ್ರೀ ಮಂತ್ರದೊಂದಿಗೆ ಗಾಢವಾದ ಸಂಬಂಧವನ್ನು ಹೊಂದಿದ್ದರು. ವೇದಮಾತೆ ಎಂದು ಕರೆಯಲ್ಪಡುವ ಗಾಯತ್ರೀ ದೇವಿ ಅವರ ಗೆಳತಿ, ಗುರು ಮತ್ತು ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಿದರು.
ವಿಶ್ವವಿದ್ಯಾಲಯದಲ್ಲಿ ಸೇರಿದಾಗ ಗಾಯತ್ರೀ ಉಪಾಸನೆ ಉನ್ನತ ಶಿಖರವನ್ನು ತಲುಪಿತು. ಆ ಸಮಯದಲ್ಲಿ, ಅವರು ಶಾಂತಿ ಆಶ್ರಮಕ್ಕೆ ಹೋಗಿ, ಶುಕ್ರವಾರ ಸಂಜೆಯಿಂದ ಸೋಮವಾರ ಬೆಳಿಗ್ಗೆ ವರೆಗೆ ಅರಳಿ ಮರದ ಕೆಳಗೆ ಕುಳಿತು ಶಾಂತಿಯಿಂದ ಗಾಯತ್ರೀ ಜಪವನ್ನು ಮಾಡುತ್ತಿದ್ದರು.

ವಿಶ್ವವಿದ್ಯಾಲಯದ ದಿನಗಳಲ್ಲಿ ಕೃಷ್ಣಮಾಚಾರ್ಯರು ತಮ್ಮ ಪಾಠ್ಯ ವಿಷಯಗಳ ಜೊತೆಗೆ ತಂತ್ರ, ಮಂತ್ರ, ಜ್ಯೋತಿಷ್ಯಶಾಸ್ತ್ರ, ಗುಪ್ತವಿದ್ಯೆಗಳ ಬಗ್ಗೆ ಪುಸ್ತಕಗಳನ್ನು ಓದಲು ಗ್ರಂಥಾಲಯದಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರು.



ಕೃಷ್ಣಮಾಚಾರ್ಯ ಅವರು ತಮ್ಮ 21ನೇ ವರ್ಷದಲ್ಲಿ ವಿಶ್ವವಿದ್ಯಾಲಯದ ಪೋಸ್ಟ್-ಗ್ರಾಡ್ಯುಯೆಟ್ ಪರೀಕ್ಷೆಯಲ್ಲಿ ಅದ್ಭುತವಾದ ಯಶಸ್ಸು ಸಾಧಿಸಿ ಉತ್ತೀರ್ಣರಾದರು.




ಕೃಷ್ಣಮಾಚಾರ್ಯರು ಬಹುಶಃ ಬಹು ಕಡಿಮೆ ವಯಸ್ಸಿನಲ್ಲಿ ಅದ್ಭುತ ಕವಿತ್ವ ಪ್ರತಿಭೆಯನ್ನು ಪ್ರದರ್ಶಿಸಿದರು. ಆಗಿನ ವೈಸ್ ಚಾನ್ಸಲರ್ ಡಾಕ್ಟರ್ ಸರ್.ಸಿ.ಆರ್.ರೆಡ್ಡಿ ಅವರು ಕೃಷ್ಣಮಾಚಾರ್ಯರ ಕವಿತ್ವವನ್ನು ಅಭಿನಂದಿಸಿ ಏನು ಹೇಳಿದರೆಂದರೆ:





ಶ್ರೀಮತಿ ಅಪ್ಪಮ್ಮ ಅವರನ್ನು ವಿವಾಹ ಮಾಡಿ, ಕೃಷ್ಣಮಾಚಾರ್ಯರು ಗುಂಟೂರುದಲ್ಲಿ ಇರುವ ಒಂದು ಕಾಲೇಜಿನಲ್ಲಿ ತೆಲುಗು ಉಪಾಧ್ಯಾಯರಾಗಿ ಉದ್ಯೋಗವನ್ನು ಪ್ರಾರಂಭಿಸಿದರು. ಒಂದು ಮನೆ ಬಾಡಿಗೆಗೆ ತೆಗೆದುಕೊಂಡು, ಅದರಲ್ಲಿ ಪೂಜಾಮಂದಿರವನ್ನು ಏರ್ಪಡಿಸಿ ಕೊಂಡರು.




ಗಾಯತ್ರಿ ದೇವಿಯ ಪಟವನ್ನು ಖರೀದಿಸಿ, ಪೂಜಾಮಂದಿರದಲ್ಲಿ ಇಟ್ಟುಕೊಂಡು ಧ್ಯಾನವನ್ನು ಪ್ರಾರಂಭಿಸಿದರು. ಒಂದು ತಿಂಗಳು ನಂತರ, ಅವರು ತಮ್ಮ ಕಣ್ಣುಗಳನ್ನು ಮುಚ್ಚಿ ಧ್ಯಾನ ಮಾಡುವಾಗ ಒಂದು ವಿಚಿತ್ರ ದೃಶ್ಯವನ್ನು ನೋಡಲು ಪ್ರಾರಂಭಿಸಿದರು. ರೇಶ್ಮೆಪಂಚೆ ಉಟ್ಟು ಕೊಂಡು, ವೀರಾಸನದಲ್ಲಿ ಕುಳಿತಿದ್ದ ವ್ಯಕ್ತಿಯ ಶರೀರವು ಸೊಂಟದಿಂದ ಕೆಳಗಿನ ಭಾಗವು ಕಾಣಿಸಿಕೊಳ್ಳಲು ಆರಂಭಿಸಿತು.



ಧ್ಯಾನ ಸಮಯದಲ್ಲಿ ಆ ದೃಶ್ಯವು ಸ್ಥಿರವಾಗಿ ಮುಂದುವರಿದಿತ್ತು ಮತ್ತು ದಿನದಿನಕ್ಕೂ ಅದು ಇನ್ನಷ್ಟು ಸ್ಪಷ್ಟವಾಗುತ್ತಾ ಹೋಯಿತು. ಕೆಲವು ದಿನಗಳ ನಂತರ, ಕೆಳಗಿನ ಭಾಗವು ಒಂದು ಬಲವಾದ ಮತ್ತು ಸ್ಥಿರವಾದ ವ್ಯಕ್ತಿಯ ದೇಹವಾಗಿ ಕಾಣಿಸಿಕೊಳ್ಳಿತು; ಮೇಲ್ಭಾಗವು ಗಾಯತ್ರೀ ಮಾತೆಯ ರೂಪವಾಗಿ ಕಾಣಿಸುತ್ತಿತ್ತು..



"ಮೇಲ್ಭಾಗವು ಕ್ರಮೇಣ ಪ್ರಖರವಾಗಿ, ಚುಂಬಕಶಕ್ತಿಯಿಂದ, ಶಾಂತ ಮತ್ತು ಗಂಭೀರ ಮುಖದೊಂದಿಗೆ, ಸಂತೋಷಕರವಾದ ರೂಪವನ್ನು ತೋರುವ ಮುಖವು ಸ್ಪಷ್ಟವಾಗಿ ಕಾಣಿಸಿತು."




ಕೃಷ್ಣಮಾಚಾರ್ಯರು ಈ ಹೊಸ ವ್ಯಕ್ತಿಯನ್ನು ಎಲ್ಲಿ ನೋಡಿದ್ದೇನೆ ಎಂದು ಗುರುತಿಸಲು ಆಗಲಿಲ್ಲ. ಮಾಸ್ಟರ್ ಸಿ.ವಿ.ವಿ.ಯವರು ಮೌನವಾಗಿ ತಮ್ಮ ಧ್ಯಾನದಲ್ಲಿ ಪ್ರವೇಶಿಸಿ, ಮನಸ್ಸಿನಲ್ಲಿ ಹಾಯಾಗಿ ಸ್ಥಿರವಾಗಿರುವಂತೆ ಅವರು ಅರಿತುಕೊಂಡರು.




ಕೆಲವು ದಿನಗಳ ನಂತರ, ಕೃಷ್ಣಮಾಚಾರ್ಯರು ಗೂಡವಲ್ಲಿ ಯಲ್ಲಿ ಶ್ರೀ ರಾಜಗೋಪಾಲರಾವು ಅವರನ್ನು ಭೇಟಿಯಾದಾಗ, ಸಂಜೆ 6 ಗಂಟೆಗೆ "ನಿಮಗೆ ಯಾವುದೇ ರೀತಿಯ ಆಕ್ಷೇಪ  ಇಲ್ಲದಿದ್ದರೆ, ನೀವು ನಮ್ಮೊಂದಿಗೆ ಪ್ರಾರ್ಥನೆಯಲ್ಲಿ ಭಾಗವಹಿಸಬಹುದು" ಎಂದು ಅವರು ಕೃಷ್ಣಮಾಚಾರ್ಯರೊಂದಿಗೆ ಹೇಳಿದರು.




ಪ್ರಾರ್ಥನಾಮಂದಿರದಲ್ಲಿ ಇರುವ ಚಿತ್ರಪಟವನ್ನು ನೋಡಿದಾಗ, ಕೃಷ್ಣಮಾಚಾರ್ಯರಿಗೆ ಮೈ ಝುಮ್ಮೆಂದಿತು. ಏಕೆಂದರೆ, ಅದು ಅವರು ಧ್ಯಾನದಲ್ಲಿ ಆಗಾಗ ನೋಡುತ್ತಿದ್ದ ವ್ಯಕ್ತಿಯೇ .




ಕೃಷ್ಣಮಾಚಾರ್ಯರು ಕಣ್ಣುಗಳನ್ನು ಮುಚ್ಚಿ ಕುಳಿತಾಗ, ರಾಜಗೋಪಾಲರಾವು "ನಮಸ್ಕಾರ ಮಾಸ್ಟರ್ ಸಿ.ವಿ.ವಿ." ಎಂದು ಉಚ್ಚರಿಸಿದರು. ಈ ಮಾತು ಕೇಳಿದಂತೆ, ಕೃಷ್ಣಮಾಚಾರ್ಯನ ಶರೀರದಲ್ಲಿ ಒಂದು ವಿಚಿತ್ರ ಸಂಚಲನ ಉಂಟಾಯಿತು. ಅವರ ಶರೀರವು ವಿದ್ಯುತ್ ತರಂಗದ ಸ್ಪರ್ಶವನ್ನು ಅನುಭವಿಸಿದಂತೆ  ಆಗಿತ್ತು. ಈ ಅನುಭವವು 16 ವರ್ಷ ವಯಸ್ಸಿನಲ್ಲಿ ತನ್ನ ಶಾಲೆಯಲ್ಲಿ ನಡೆದ ಒಂದು ಸಭೆಗೆ ಹಾಜರಾದಾಗ ಸಂಭವಿಸಿತು ಎಂದು ಅವರಿಗೆ ನೆನಪಾಯಿತು.ಹಾಗೆಯೇ, 5 ವರ್ಷದ ವಯಸ್ಸಿನಲ್ಲಿ ಬಾಪಟ್ಲದಲ್ಲಿ ತಮ್ಮ ತಂದೆಯ ಕೈಯಲ್ಲಿದ್ದ ಪುಸ್ತಕವನ್ನು ನೋಡಿದ ಸಮಯದಲ್ಲಿ ಮತ್ತೊಮ್ಮೆ ಅದೇ ಅನುಭವವಾಯಿತು. 1947ರಲ್ಲಿ ಕಾರ್ತಿಕ ಪೌರ್ಣಮಿಯಂದು ನಡೆದ ಘಟನೆಗೂ ಅವು ಸಂಬಂಧಪಟ್ಟಿರುವುದಾಗಿ ಅವರು ನೆನೆಸಿಕೊಂಡರು.  ಪ್ರೇಯರಿಂದ ಹೊರಬಂದ ನಂತರ, ಅವರ ಶರೀರವು ಸಂಪೂರ್ಣವಾಗಿ ಹಗುರವಾಗಿ, ಮನಸ್ಸು ತಾಜಾ ಹಾಗೂ ನಿರ್ಮಲವಾಗಿದ್ದು, ಯಾವುದೇ ಪ್ರಯತ್ನವಿಲ್ಲದೆ ಪ್ರಶಾಂತ ಸ್ಥಿತಿಯನ್ನು ಅನುಭವಿಸಿದರು. ಇವೆಲ್ಲವೂ, ವಿಭಿನ್ನ ಸಂದರ್ಭಗಳಲ್ಲಿ ನಡೆದ ಘಟನೆಗಳು ಪರಸ್ಪರ ಹೊಂದಿಕೆಯಾಗಿದ್ದವು ಎಂದು ಅವರು ಗಮನಿಸಿದರು. ನಂತರ, ಸಿ.ವಿ.ವಿ. ಯವರ ಯೋಗಮಾರ್ಗದ ವಿವರಗಳನ್ನು ರಾಜಗೋಪಾಲರಾವುರವರಿಂದ  ಕೇಳಿ ತಿಳಿದುಕೊಂಡರು.





* ಗೂಡವಲ್ಲಿ, ತೆನಾಲಿ, ಬಾಪಟ್ಲ ಭಾರತದೇಶದ ಆಂಧ್ರ ರಾಜ್ಯದ ಗುಂಟೂರು ಜಿಲ್ಲೆಯ ಗ್ರಾಮಗಳು.

ಮಾಸ್ಟರ್ ಸಿ.ವಿ.ವಿ. ಯವರ ಬಗ್ಗೆ ತಿಳಿದ ನಂತರ, ಮಾಸ್ಟರ್ ಅವರು ಕೃಷ್ಣಮಾಚಾರ್ಯರಿಗೆ ದರ್ಶನ ನೀಡಿ ಸಂಭಾಷಿಸಲು ಪ್ರಾರಂಭಿಸಿದರು.


ದಿವ್ಯಯೋಜನೆಯ(1) ಭಾಗವಾಗಿ, ಕೃಷ್ಣಮಾಚಾರ್ಯರನ್ನು ಗುಂಟೂರಿನ ದಿವ್ಯಜ್ಞಾನ ಸಮಾಜವು ಮಹಾಭಾರತದ ಕುರಿತು ಪ್ರವಚನ ಹೇಳಲು ಆಹ್ವಾನಿಸಿತು.





ಗ್ರಂಥಾಲಯದಲ್ಲಿ ಮೆಡಮ್ ಹೆಚ್.ಪಿ. ಬ್ಲಾವೆಟ್ಸ್ಕಿ ರಚಿಸಿದ "ದಿ ಸೀಕ್ರೆಟ್ ಡಾಕ್ಟ್ರಿನ್" (2) ಎಂಬ ಪುಸ್ತಕವು ಕೃಷ್ಣಮಾಚಾರ್ಯರ ಗಮನವನ್ನು ಸೆಳೆದಿತು. ವಿಜ್ಞಾನ, ಧರ್ಮ ಮತ್ತು ತತ್ತ್ವಶಾಸ್ತ್ರಗಳ ಸಂಯೋಜನೆಯಾದ "ದಿ ಸೀಕ್ರೆಟ್ ಡಾಕ್ಟ್ರಿನ್" ಈ (ಗುಪ್ತವಿದ್ಯೆ) ಪುಸ್ತಕವು, ಅವರ ತಂದೆ ಓದಿದಂತೆ ಅವರಿಗೂ ನೆನಪಾಯಿತು.

ಅವರು ಆ ಪುಸ್ತಕವನ್ನು ತೆಗೆದುಕೊಂಡು ನೇರವಾಗಿ ಓದಲು ಪ್ರಾರಂಭಿಸಿದಾಗ, ಪುಸ್ತಕದಲ್ಲಿ ಬಳಸಿದ ಅನೇಕ ಸಂಕೇತಾತ್ಮಕ ಪದಗಳು ಅರ್ಥಮಾಡಿಕೊಳ್ಳಲು ಸ್ವಲ್ಪ ಕಷ್ಟವಾಗಿ ಭಾಸವಾದವು. ಆದ್ದರಿಂದ, ರಾತ್ರಿಯ ಒಂದು ಗಂಟೆಗೆ ಆ ಪುಸ್ತಕವನ್ನು ಬದಿಗಿಟ್ಟು, ಕಾಫಿ ಕುಡಿಯಲು ಹೊರಗೆ ಹೋದರು.






*(1) ಮಾನವನಿಗೆ ಅರ್ಥವಾಗುವದಕ್ಕಿಂತ ದೊಡ್ಡ ಪ್ರಯೋಜನವು ಜೀವನಕ್ಕೆ ಇದೆ. ಮಾನವಜಾತಿಯನ್ನು ಉನ್ನತ ಗುರಿಯ ಕಡೆಗೆ ಪ್ರೇರೇಪಿಸುವುದೇ "ದಿವ್ಯಯೋಜನೆ". ಅದನ್ನು ಗುರುತಿಸಿ ಅನುಸರಿಸಿದವರು ಪರಮಗುರುಗಳು ಮತ್ತು ಅವರ ಅನುಯಾಯಿಗಳು.*

*(2) ನಮಗೆ ಕಾಣುವ ಭೌತಿಕ ಜಗತ್ತು ಮೇಲಿನ ಹೊದಿಕೆ ಮಾತ್ರ. ಇದರ ಮೇಲೆ ನಾವು ಕಾಣುವ ಸೂಕ್ಷ್ಮ ಪದರಗಳು ಅಥವಾ ಲೋಕಗಳು ಇವೆ. ಹಾಗೆಯೇ ನಮ್ಮ ಭೌತಿಕ ಶರೀರದ ಜೊತೆಗೆ ಸೂಕ್ಷ್ಮ ಶರೀರಗಳು ಇವೆ. ಈ ಲೋಕಗಳ, ಶರೀರಗಳ ವಿವರಗಳು, ಅವುಗಳ ನಡುವಿನ ಸಂಬಂಧ ಮತ್ತು ಅವು ಯುಗಗಳಲ್ಲಿ ಹೇಗೆ ಪರಿವರ್ತನೆಗೊಂಡಿವೆ, ಅವುಗಳ ಭವಿಷ್ಯದಲ್ಲಿ ಏನು ಆಗಲಿದೆ ಎಂಬ ವಿಷಯಗಳು ದಿವ್ಯಜ್ಞಾನಕ್ಕೆ ಸಂಬಂಧಿಸಿದವು.*

ಕಾಫಿ ಕುಡಿದು ಮನೆಗೆ ಹಿಂತಿರುಗುತ್ತಿದ್ದಾಗ, ದೀರ್ಘವಾದ ಬಿಳಿ ಕೂದಲು ಮತ್ತು ಗಡ್ಡವಿರುವ ವೃದ್ಧನೊಬ್ಬ ಎದುರಾಗಿ, ಆಂಗ್ಲದಲ್ಲಿ ಈ ರೀತಿ ಕೇಳಿದರು:





ಉತ್ತಮ ಬಟ್ಟೆಗಳನ್ನು ಧರಿಸದೆ ಇದ್ದರೂ ಆ ವ್ಯಕ್ತಿ ಸುನಾಯಾಸವಾಗಿ ಆಂಗ್ಲದಲ್ಲಿ ಮಾತಾಡುವುದನ್ನು ನೋಡಿ ಕೃಷ್ಣಮಾಚಾರ್ಯರಿಗೆ ಆಶ್ಚರ್ಯವಾಯಿತು. ಆಕಸ್ಮಿಕವಾಗಿ ಆ ವ್ಯಕ್ತಿ ಈ ರೀತಿಯಾಗಿ ಕೇಳಿದನು:




ಅದನ್ನು ಕೇಳಿ ಕೃಷ್ಣಮಾಚಾರ್ಯ ಅವರು ಆಶ್ಚರ್ಯಚಕಿತರಾದರು. ತಾವು ಸೀಕ್ರೆಟ್ ಡಾಕ್ಟ್ರಿನ್ ಓದುತ್ತಿರುವುದು ಆ ವ್ಯಕ್ತಿಗೆ ಹೇಗೆ ತಿಳಿಯಿತು" ಎಂದು ಯೋಚಿಸಿದರು. ಇದಾದಮೇಲೆ ಆ ವ್ಯಕ್ತಿ ಮತ್ತೊಮ್ಮೆ ಕೇಳಿದನು:





ಭೋಜನ ಮುಗಿಸಿ ಹೋಟೇಲ್‌ನಿಂದ ಹೊರಗೆ ಬಂದು ರಸ್ತೆ ಮೇಲೆ ನಡೆಯುತ್ತಿದ್ದಾಗ, ಆ ವ್ಯಕ್ತಿ ಹೀಗೆ ಹೇಳಿದರು:





ಆ ವಿಚಿತ್ರ ವ್ಯಕ್ತಿ ಮತ್ತೊಮ್ಮೆ ಪುನರುದ್ಘಾಟಿಸುತ್ತಾ, ಆದೇಶವಾಗಿಯೇ ಹೇಳಿದರು: "ಸೀಕ್ರೆಟ್ ಡಾಕ್ಟ್ರಿನ್ ಓದುವ ಮೊದಲು ಭಗವದ್ಗೀತೆಯನ್ನು ಓದು."ಆ ಆಜ್ಞೆಯನ್ನು ಸ್ವೀಕರಿಸಿ, ಕೃಷ್ಣಮಾಚಾರ್ಯರು ಭಗವದ್ಗೀತೆಯನ್ನು ಮತ್ತೊಮ್ಮೆ ಯಾವುದೇ ಅಡ್ಡಿ ಇಲ್ಲದೆ ಆದ್ಯಂತವೂ ಓದಿದರು.

ಭಗವದ್ಗೀತೆಯನ್ನು ಓದುತ್ತಿದ್ದಾಗ, ಕಲಿಯುಗಕ್ಕೆ ಸಂಬಂಧಿಸಿದ ಶ್ರೀಕೃಷ್ಣನ ಯೋಜನೆ ಹೇಗೆ ಅನುಷ್ಠಾನಗೊಳ್ಳುತ್ತಿದೆ ಎಂಬುದು ಮಹತ್ತರವಾದ ದಿವ್ಯದರ್ಶನ  ಕೃಷ್ಣಮಾಚಾರ್ಯರಿಗೆ ಗೋಚರಿಸಿತು. ಈ ಅನುಭವದಿಂದ ಅವರು ಉತ್ಸಾಹದಿಂದ ತುಂಬಿಕೊಂಡರು! ಮತ್ತೊಮ್ಮೆ ಆ ವಿಚಿತ್ರ ವ್ಯಕ್ತಿಯನ್ನು ಭೇಟಿಯಾಗುವ ಆಸೆಯಿಂದ ಕೃಷ್ಣಮಾಚಾರ್ಯರು ಅರ್ಧರಾತ್ರಿ ಸಮಯದಲ್ಲಿ ಅದೇ ಹೊಟೇಲ್‌ಗೆ ಹೋಗಿ, ಕಾಫಿ ಕುಡಿಯುತ್ತಾ, ರಸ್ತೆ ಗಮನಿಸಿ ನೋಡಿದರೂ ಆ ವ್ಯಕ್ತಿಯ ಸುಳಿವು ಎಲ್ಲಿಯೂ ಕಾಣಲಿಲ್ಲ.






ಆ ಪುಸ್ತಕವನ್ನು ಓದಲು ಆರಂಭಿಸಿದ ಕ್ಷಣದಿಂದ, ಕೃಷ್ಣಮಾಚಾರ್ಯರಿಗೆ ಹಿರಿಯ ಹೊಸ ವ್ಯಕ್ತಿಗಳು ಪರಿಚಯವಾದರು. ಅವರು ಪುಸ್ತಕದಲ್ಲಿನ ವಿಷಯಗಳನ್ನು ವಿವರಿಸಿ, ಅನುಭವಾಧಾರಿತವಾಗಿ ಅವುಗಳನ್ನು ಅರ್ಥಮಾಡಿಕೊಳ್ಳಲು ಮಾರ್ಗದರ್ಶನ ನೀಡಿದರು.


ಆ ಪುಸ್ತಕದಲ್ಲಿ ವ್ಯಕ್ತವಾದ ದಿವ್ಯಯೋಜನೆಯನ್ನು ದರ್ಶಿಸಿದರು, ಆ ಯೋಜನೆಯಲ್ಲಿ ತನ್ನ ಪಾತ್ರವನ್ನು ಕೃಷ್ಣಮಾಚಾರ್ಯ ಗ್ರಹಿಸಿಕೊಂಡರು. ಅದೂ ಅಲ್ಲದೆ, ಪರಮಗುರು ಪರಂಪರೆಯು, ಅವರ ಕಾರ್ಯಯೋಜನೆ, ಭೂಮಿಯ ಮೇಲಿನ ಜೀವಿಗಳ ಅಭಿವೃದ್ಧಿಯೊಂದಿಗೆ ಅವರ ಸಂಬಂಧ, ಮೇಡಮ್ ಹೆಚ್.ಪಿ. ಬ್ಲಾವೆಟ್ಸ್ಕಿ ಮತ್ತು ಮಾಸ್ಟರ್ ಸಿ.ವಿ.ವಿ. ಯವರ ಅವಿನಾಭಾವ ಸಂಬಂಧಗಳ ಕುರಿತು ಬೋಧನೆ ಸ್ಪಷ್ಟವಾಯಿತು. ಜಗದ್ಗುರು ಮೈತ್ರೇಯ, ಮರುವು, ದೇವಾಪಿ, ಸೇರಾಪಿಸ್, ಜೀಸಸ್ ಹೀಗೆ ಪ್ರಮುಖ ಪರಮಗುರುಗಳು ಈ ಪರಂಪರೆಯ ಭಾಗವಾಗಿದ್ದು, ಅವರು ಮಾನವಜಾತಿಯ ಭವಿಷ್ಯಕ್ಕೆ ಮಾರ್ಗದರ್ಶನ ಮಾಡುವ ಆಧ್ಯಾತ್ಮಿಕ ಶಕ್ತಿಗಳಾಗಿದ್ದಾರೆ.





** ಇನ್ನೂ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬೇಕಾದವರು "ಮಿಥಿಲ" ಎಂಬ ಗ್ರಂಥವನ್ನು ನೋಡಬಹುದು.*


ಪುಸ್ತಕವನ್ನು ಓದಿ ಮುಗಿಸಿದ ನಂತರ, ಆ ವೃದ್ಧನು ಮತ್ತೊಮ್ಮೆ ದರ್ಶನವನ್ನು ನೀಡಿದರು. ಈ ಬಾರಿ ಆಶ್ಚರ್ಯಕರವಾಗಿ ಗೋಡೆಯೊಳಗಿಂದ ನೇರವಾಗಿ ನಡೆಯುತ್ತಾ ಗೃಹದೊಳಗೆ ಬಂದರು. ಪ್ರಕಾಶಮಾನವಾದ ಶಕ್ತಿಯಿಂದ ಕಂಡರು.








ಪರಮಗುರುಗಳ ದಿವ್ಯಯೋಜನೆಯಲ್ಲಿ ಭಾಗಿಯಾಗಲು ಕೃಷ್ಣಮಾಚಾರ್ಯ ಸಮ್ಮತಿಯನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ಕಾಗಿ ಆಂತರಿಕ ಮತ್ತು ಬಾಹ್ಯ ಸಿದ್ಧತೆಗಾಗಿ 12 ವರ್ಷಗಳ ಸಾಧನೆ ಅಗತ್ಯವಾಯಿತು.





ಕೃಷ್ಣಮಾಚಾರ್ಯರು 1953 ರಿಂದ 1965 ರವರೆಗೆ ಈ ನಿಯಮವನ್ನು ಸದ್ದಿಲ್ಲದೆ, ಗೋಪ್ಯವಾಗಿ ಅನುಸರಿಸಿದರು, ಪ್ರತಿದಿನವೂ ಅವರು ಪ್ರಾರ್ಥನೆಗಳನ್ನು ಸಲ್ಲಿಸತೊಡಗಿದರು, ಬೆಳಗ್ಗೆ ಪೂಜೆಗಳನ್ನು ನಡೆಸಿ  ಮತ್ತು ಸಾಯಂಕಾಲ ರಾಮಾಯಣ, ಮಹಾಭಾರತ, ಭಗವದ್ಗೀತೆಯ ಬಗ್ಗೆ ಪ್ರವಚನಗಳನ್ನು ನೀಡುತ್ತಿದ್ದರು. ಅವರು ಉಪಾಧ್ಯಾಯರಾಗಿ ಬೆಳಿಗ್ಗೆ ಕೆಲಸಗಳನ್ನು ನಿರ್ವಹಿಸಿದ ನಂತರ, ರಾತ್ರಿ ಸಮಯದಲ್ಲಿ ಗೋಪ್ಯವಾದ ಉಪದೇಶಗಳನ್ನು ಸ್ವೀಕರಿಸಿದರು. ಈ ಉಪದೇಶಗಳಲ್ಲಿ ಆಧ್ಯಾತ್ಮಿಕ ಜ್ಯೋತಿಷ್ಯಶಾಸ್ತ್ರ, ಆಧ್ಯಾತ್ಮಿಕ ಮಾನಸಿಕಶಾಸ್ತ್ರ, ಧ್ವನಿ, ಬಣ್ಣ , ಸಂಖ್ಯೆ ಮತ್ತು ಚಿಹ್ನೆಗಳ ಪ್ರಮಾಣಗಳು ಮುಂತಾದ ವಿಷಯಗಳು ಸೇರಿದ್ದವು. ಈ ಸಮಯದಲ್ಲಿ, ಮಾಸ್ಟರ್ ಸಿ.ವಿ.ವಿ. ಯೋಗಮಾರ್ಗದಲ್ಲಿ "ಲಿಟಿಲ್ ಮಾಸ್ಟರ್" ಎಂದು ಪ್ರಸಿದ್ಧರಾದ ಮಾಸ್ಟರ್ ಎಮ್.ಎನ್.  ರವರು ಕೃಷ್ಣಮಾಚಾರ್ಯರಿಗೆ ಮಾರ್ಗದರ್ಶನ ನೀಡಲು ಪ್ರಾರಂಭಿಸಿದರು.






ಅವರನ್ನು ಕ್ರತುವಿದ್ಯಾ ಸಂಪ್ರದಾಯದಲ್ಲಿ ಸಹ ಸೇರಿಸಿದರು. ಅವರಿಗೆ ನೀಡಲಾಗುತ್ತಿರುವ ಕಠಿಣ ತರಬೇತಿ ಮತ್ತು ಅವರಲ್ಲಿ ಉದಯಿಸುವ ಆಧ್ಯಾತ್ಮಿಕ ಆಯಾಮಗಳು ಕುಟುಂಬದ ಸದಸ್ಯರು ಮತ್ತು ಹತ್ತಿರದವರಿಗೂ ಸಹ ಗೊತ್ತಿರಲಿಲ್ಲ.


ಕೃಷ್ಣಮಾಚಾರ್ಯರು ನೀಡುವ ಉಪನ್ಯಾಸಗಳು ಮತ್ತು ಪೂಜಾದಿಕಗಳಲ್ಲಿ ಭಾಗವಹಿಸುವವರು, ಜ್ಞಾನಕ್ಕಾಗಿ ಕೆಲವರು, ಜ್ಯೋತಿಷ್ಯ ವಿಜ್ಞಾನಕ್ಕಾಗಿ ಇನ್ನಿತರರು, ರೋಗ ನಿವಾರಣೆಯಾಗಿ ಮತ್ತಷ್ಟು ಹಲವಾರು ಮಂದಿ ಆಸಕ್ತರು ಅವರನ್ನು ಬೆಂಬಲಿಸಿದರು. ಅವರ ವ್ಯಕ್ತಿತ್ವವು ಅಯಸ್ಕಾಂತದಂತೆ ಆಕರ್ಷಕವಾಗಿತ್ತು. ಎಲ್ಲರೂ ಅವರ ಅಪಾರವಾದ ಪ್ರೀತಿಯಲ್ಲಿ ಕರಗಿ, ಮಾಸ್ಟರ್ ಸಿ.ವಿ.ವಿ. ಯೋಗವನ್ನು ಅನುಸರಿಸಬೇಕೆಂದು ಪ್ರಾರಂಭಿಸಿದರು. ಅವರನ್ನು ಮಾಸ್ಟರ್ ಇ.ಕೆ. ಎಂದು ಪ್ರೀತಿಯಿಂದ ಕರೆಯಲು ಆರಂಭಿಸಿದರು. ಇಂತಹ ಕುಟುಂಬಗಳು ಮತ್ತು ಅನುಯಾಯಿಗಳೊಂದಿಗೆ, ಅವರು 1962 ಜನವರಿ 11, 12, 13 ರಂದು ಮೊದಲ ಬೃಂದಜೀವನ ಎಂಬ ಗುರುಪೂಜಾ ಮಹೋತ್ಸವವನ್ನು ಆರಂಭಿಸಿದರು.




ಆ ತರಬೇತಿ ದಿನಗಳಲ್ಲಿ, ಮಾಸ್ಟರ್ ಇಕೆ ಅವರು "ಮಿಹಿರ" ಎಂಬ ಜ್ಯೋತಿಷ್ಯ ಮಾಸಪತ್ರಿಕೆಯನ್ನು ನಿರ್ವಹಿಸುತ್ತಿದ್ದರು. ಒಂದು ಲೇಖನದಲ್ಲಿ, ಅವರು ಭವಿಷ್ಯದ ಗ್ರಹಗಳ ಸ್ಥಾನಗಳು ಮತ್ತು ಅವುಗಳ ಮಹತ್ವದ ಬಗ್ಗೆ ಬರೆದಿದ್ದಾರೆ.



ಆ ಲೇಖನವನ್ನು ಬೆಲ್ಜಿಯಮ್ ವಾಸಿಯಾಗಿದ್ದ ಶ್ರೀ ಅಲ್ಬರ್ಟ್ ಶಶಿ ಓದಿದರು. ಅವರು ದಿವ್ಯಜ್ಞಾನವನ್ನು, ಮೆಡಮ್ ಬ್ಲಾವಟ್ಸ್ಕಿ ಮತ್ತು ಬೆಯಿಲೀ ಅವರ ಬರಹಗಳನ್ನು ಚೆನ್ನಾಗಿ ಓದಿದವರು.




ಆ ಲೇಖನವನ್ನು ಓದುತ್ತಲೇ ಪ್ರೇರಿತವಾದ ಶ್ರೀ ಶಶಿ, ಮಾಸ್ಟರ್ ಇ.ಕೆ. ಅವರನ್ನು ನೀಲಗಿರಿ ಪರ್ವತಗಳಲ್ಲಿ ಇರುವ ತಮ್ಮ ಆಶ್ರಮಕ್ಕೆ ಬಂದು, ಯೋಗ ಉಪದೇಶಗಳನ್ನು ನೀಡುವಂತೆ ವಿನಂತಿಸಿದರು. ಮಾಸ್ಟರ್ ಇ.ಕೆ. ಒಪ್ಪಿಕೊಂಡು, ಒಂದು ತಿಂಗಳ ಕಾಲ ತರಗತಿಗಳನ್ನು ನಡೆಸಿದರು.




ನೀಲಗಿರಿ ಪರ್ವತಗಳಲ್ಲಿ ಅಗ್ರಸ್ತ್ಯಾಂಶದಿಂದ ಇರುವ ಸಿದ್ಧರು ಹಿಮಾಲಯ ಗುರುಪರಂಪರೆ ಯೊಂದಿಗೆ ಕೆಲಸಮಾಡುತ್ತಿದ್ದಾರೆ ಎಂದು, ಅವರ ಕುರಿತು ಮಾಹಿತಿ ತಿಳಿಯಲು ಶ್ರೀ ಶಶಿ ಎಷ್ಟೋ ಆಸಕ್ತರಾಗಿದ್ದರು.




ಮಾಸ್ಟರ್ ಸಿ.ವಿ.ವಿ. ಬಗ್ಗೆ ವಿವರಿಸಿದಾಗ ಮತ್ತು ಅವರ ಫೋಟೋವನ್ನು ತೋರಿಸಿದಾಗ, ಶ್ರೀ ಶಶಿ ತಮ್ಮ ಧ್ಯಾನದಲ್ಲಿ ಕಂಡ ಸಿದ್ಧರು ಅವರೇ ಎಂದು ಗುರುತಿಸಿದರು. ನಂತರ, ಮಾಸ್ಟರ್ ಇ.ಕೆ. ಯವರು ತಾವು ಮಾಸ್ಟರ್ ಸಿ.ವಿ.ವಿ. ಯವರಿಂದ ಪಡೆಯುತ್ತಿದ್ದ ಜ್ಯೋತಿಷ್ಯವಿದ್ಯೆ ಮತ್ತು ಇತರ ಉಪದೇಶಗಳನ್ನು ಓದಿ ತಿಳಿಸಿ ದಾಗ, ಆ ಗಹನವಾದ ವಿದ್ಯೆಗೆ ಶ್ರೀ ಶಶಿ ತುಂಬಾ ಆಶ್ಚರ್ಯಚಕಿತರಾದರು.



ಆ ಸಂಭಾಷಣೆಯು ಮಾಸ್ಟರ್ ಇ.ಕೆ. ಅವರ ಸಾಹಿತ್ಯಿಕ ಕಾರ್ಯಕ್ಕೆ ಪ್ರಾರಂಭವಾಯಿತು. ಮಾಸ್ಟರ್ ಇ.ಕೆ. ಅವರಿಂದ ಸಮಯ ಮತ್ತು ಅಗತ್ಯವನ್ನು ಅನುಸರಿಸಿ ಹಲವಾರು ಗ್ರಂಥಗಳು ಪ್ರಕಟವಾಗಿವೆ.




ಶ್ರೀ ಶಶಿ, ಮಾಸ್ಟರ್ ಸಿ.ವಿ.ವಿ. ಅವರ ಚಿತ್ರವನ್ನು ತಮ್ಮ ಪೂಜಾಮಂದಿರದ ಕೇಂದ್ರಸ್ಥಾನದಲ್ಲಿ ಇಟ್ಟುಕೊಂಡರು ಮತ್ತು ಫ್ರಾನ್ಸ್, ಬೆಲ್ಜಿಯಂ ದೇಶಗಳಲ್ಲಿರುವ ತಮ್ಮ ಅನುಯಾಯಿಗಳ ಪೂಜಾ ಮಂದಿರಗಳಲ್ಲಿ ಸಹ ಈ ರೀತಿಯ ವ್ಯವಸ್ಥೆ ಮಾಡಿದರು.



ಆ ದಿನದಿಂದ ಮಾಸ್ಟರ್ ಸಿ.ವಿ.ವಿ. ಪ್ರಾರ್ಥನೆ ಪಶ್ಚಿಮ ದೇಶಗಳಿಗೆ ಪರಿಚಯವಾಗಿದ್ದು, ಪ್ರಾಕ್ಪಶ್ಚಿಮ ಆಧ್ಯಾತ್ಮಿಕ ಸಮನ್ವಯದ ತಳಹದಿಯನ್ನು ಹಾಕಿದರು.

ಈ ಶಿಕ್ಷಣ ಕಾಲದಲ್ಲಿ ಮಾಸ್ಟರ್ ತೀವ್ರವಾದ ಸಂಕಷ್ಟವನ್ನು ಎದುರಿಸಿದ್ದಾರೆ. ತನ್ನ ಎರಡನೇ ಮಗನು ತೀವ್ರವಾದ ಅನಾರೋಗ್ಯದಿಂದ (ಮೂರ್ಚೆ) ಬಳಲುತ್ತಿದ್ದಾಗ ಅಲೋಪತಿ, ಆಯುರ್ವೇದ ಚಿಕಿತ್ಸೆಗಳು ಯಾವುದೇ ಉಪಶಮನ ನೀಡಲಿಲ್ಲ.




ತನ್ನ ಮಿತ್ರರಾದ ಹೋಮಿಯೋ ವೈದ್ಯರ ಸಹಾಯದಿಂದ ತನ್ನ ಮಗನಿಗೆ ಚಿಕಿತ್ಸೆ ಪ್ರಾರಂಭಿಸಿದರು. ಆರೋಗ್ಯ ಕ್ರಮೇಣ ಸುಧಾರಿಸಿತು. ಆಗ ಮಾಸ್ಟರ್ ಇ.ಕೆ.ಯವರಿಗೆ ಹೋಮಿಯೋ ವೈದ್ಯವಿಧಾನವನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿ ಉಂಟಾಯಿತು.



ಹೋಮಿಯೊಪತಿ ಶಾಸ್ತ್ರವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಮಾಡಿದ ಪ್ರಯತ್ನದಲ್ಲಿ ಇಲ್ಲಿಯವರೆಗೂ ಬರೆಯಲ್ಪಡದ ಹಲವಾರು ಹೊಸ ವಿಚಾರಗಳನ್ನು ಕಂಡುಹಿಡಿಯಲಾಯಿತು. ಈ ಹೊಸ ಹೋಮಿಯೊ ಅವಗಾಹನೆಯ ಮೂಲಕ ತಮ್ಮ ಪುತ್ರನಿಗೆ ಚಿಕಿತ್ಸೆ ನೀಡಿದ ಅವರು, ನರಳುತ್ತಿದ್ದ ಮಗನನ್ನು ಗುಣಪಡಿಸುವಲ್ಲಿ ಯಶಸ್ವಿಯಾದರು. ಕೆಲವೇ ದಿನಗಳಲ್ಲಿ, ಸ್ನೇಹಿತರು ಮತ್ತು ಕುಟುಂಬದ ಸದಸ್ಯರೂ ಅವರಿಂದ ಹೋಮಿಯೊ ಔಷಧಿಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು. ಹೋಮಿಯೊ ಔಷಧಿಯಿಂದ ಆಯುಷ್ಯವನ್ನು ಮತ್ತು ಇತರರ ಸೇವೆಯನ್ನು ಮಾಡಬಹುದು ಎಂಬ ಸತ್ಸಂಕಲ್ಪವು ಮಾಸ್ಟರ್ ಇ.ಕೆ. ಅವರಿಗೆ ಪ್ರೇರಣೆನೀಡಿತು.







ಈ ಮಾಹಿತಿ ಒಬ್ಬರಿಂದ ಮತ್ತೊಬ್ಬರಿಗೆ ಹರಡಿದ ನಂತರ, ಎಲ್ಲಾ ಪ್ರದೇಶಗಳಿಂದ ಜನರು ಅವರ ಚಿಕಿತ್ಸೆಯನ್ನು ಬಯಸಿ ಬಂದರು. ರೋಗಿಗಳಾಗಿ ಬಂದವರು, ಕ್ರಮೇಣ ಅವರು ಸಹಾಯಕರಾಗಿ ಬದಲಾದರು.. ಸಾವಿರಾರು ಜನರಿಗೆ ವೈದ್ಯಕೀಯ ಸೇವೆ ನೀಡಿದರು.

ಈ ಗುಪ್ತ ತರಬೇತಿಯನ್ನು ಪೂರ್ಣಗೊಳಿಸಿದ ನಂತರ, ಅವರ ನಿವಾಸವು ಗುಂಟೂರಿನಿಂದ ವಿಶಾಖಪಟ್ಟಣಕ್ಕೆ ಸ್ಥಳಾಂತರಗೊಂಡಿತು. ತೆಲುಗು ಭಾಷೆಯಲ್ಲಿ ಡಾಕ್ಟರೇಟ್ ವಿದ್ಯಾಭ್ಯಾಸಕ್ಕಾಗಿ ಎಂಬುದು ಒಂದುಕಾರಣವಾಗಿ ಕಾಣಿಸಬಹುದು. ಆದರೆ ಅದು ವಿಶೇಷ ಉದ್ದೇಶವನ್ನು ಈಡೇರಿಸಲು ಪರಮ ಗುರುವಿನ ಆಜ್ಞೆಯ ಮೇರೆಗೆ ಮಾಡಲ್ಪಟ್ಟಿದೆ ಎಂಬುದು ಆಂತರಿಕ ಸತ್ಯ.


ವಿಶಾಖಪಟ್ಟದಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸಲು, ಅವರು "ಪ್ರಾಣವನ್ನು ಉದ್ಧರಿಸು, ಯೋಗವನ್ನು ಉಪದೇಶಿಸು" ಎಂಬ ತತ್ವವನ್ನು ಆಯ್ಕೆ ಮಾಡಿಕೊಂಡರು. ತರಬೇತಿಗೆ ಉಪದೇಶ ಮತ್ತು ಚಿಕಿತ್ಸೆ ಎರಡು ರೆಕ್ಕೆಗಳಾಗಿ ಅವರನ್ನು ಅನುಸರಿಸಿದವರಿಗೆ ಪರಿವರ್ತನೆ ದಿಶೆಯತ್ತ ಅವರನ್ನು ಮುನ್ನಡೆಸಿದರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಹೊಮಿಯೋ ಔಷಧಿಗಳಿಗಾಗಿ ಮಾಸ್ಟರ್ ಇ.ಕೆ ಬಳಿ ಸೇರಿದವರು ಸಹ ಮಾಸ್ಟರ್ ಸಿ.ವಿ.ವಿ. ಯೋಗ ಮಾರ್ಗ ಮತ್ತು ಮಾಸ್ಟರ್ ಇ.ಕೆ. ಅವರ ಹೊಸ ಉಪದೇಶಗಳಿಗೆ ಪರಿಚಯವಾದರು.





ಸಾಧಾರಣ ಸಂಭಾಷಣೆಯ ಮೂಲಕ ಆಳವಾದ ಸತ್ಯಗಳನ್ನು ತಿಳಿಯುವ ಸಾಮರ್ಥ್ಯವು ಅವರ ವಿಶಿಷ್ಟತೆಯಾಗಿದೆ. ಮಕ್ಕಳಿಗೆ ಹಾಗೂ ತತ್ವಜ್ಞರಿಗೆ ಸಹ ಸುಲಭವಾಗಿ ಬೋಧಿಸಲು ಅವರಲ್ಲಿ ಪರಿಣತಿ ಇದೆ. ದಿನಚರ್ಯೆಯಲ್ಲಿ ಅವರು ಕಲಿತ ಜ್ಞಾನವನ್ನು ಹೇಗೆ ಅನುಷ್ಠಾನಗೊಳಿಸಬೇಕೆಂದು ಪ್ರಾಯೋಗಿಕ ಮಾರ್ಗದರ್ಶನ ನೀಡಿ, "ಗುರು" ಎಂಬ ಪದಕ್ಕೆ ಸರಿಯಾದ ಪರಿಭಾಷೆಯಾಗಿ ನಿಂತರು.





** ಇನ್ನೂ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬೇಕಾದವರು "ಮಿಥಿಲ" ಎಂಬ ಗ್ರಂಥವನ್ನು ನೋಡಬಹುದು.*


ಧ್ಯಾನ, ಸ್ವಾಧ್ಯಾಯ ಮತ್ತು ಸೇವೆಗಳ ಮೂಲಕ ನಾವು ನಮ್ಮೊಳಗೆ ವಿಕಸಿತವಾಗಿ ಉತ್ತಮ ವ್ಯಕ್ತಿಗಳಾಗುತ್ತೇವೆ ಎಂದು ಅವರು ಉಪದೇಶಿಸಿದರು.
ಸೇವೆ ಮಾಡುತ್ತಿರುವುದನ್ನು ನಾವು ಮರೆಯುವವರೆಗೆ ಸೇವೆ ಮಾಡಬೇಕು
ತೇಲುಗು ಅಥವಾ ಇಂಗ್ಲಿಷ್‌ನಲ್ಲಿ ಅನರ್ಗಳವಾಗಿ ಮಾತನಾಡುವ ವಾಕ್ಚಟಿಮೆಯನ್ನು ಹೊಂದಿದ ಮಾಸ್ಟರ್ ಇ.ಕೆ. ವಿಶ್ವವಿಜ್ಞಾನದ ಗಣಿಯಾಗಿದ್ದರು. ಪ್ರಪಂಚದ ಎಲ್ಲಾ ಪವಿತ್ರ ಗ್ರಂಥಗಳ ಉಪದೇಶಗಳನ್ನು ಸಂಯೋಜಿಸಿ ಉಪನ್ಯಾಸಗಳನ್ನು ನೀಡುತ್ತಿದ್ದರು.
ಜ್ಞಾನಕ್ಕೆ ಭಾರತೀಯ ಅಥವಾ ಪಾಶ್ಚಾತ್ಯ ಎಂದು ಯಾವುದೇ ಭೇದವಿಲ್ಲ. ಸತ್ಯವನ್ನು ಅನ್ವೇಷಿಸುವವರು ಪ್ರಪಂಚದ ಧರ್ಮಗ್ರಂಥಗಳನ್ನು ಪರಿಶೀಲಿಸಿ ಅಧ್ಯಯನ ಮಾಡಬೇಕು. ನಂತರ ಅವರು ಸತ್ಯ ಒಂದೇ ಮತ್ತು ಅದು ಶಾಶ್ವತವಾದದ್ದು ಎಂದು ಗ್ರಹಿಸಬಹುದು.
ರಾಮಾಯಣ, ಭಾರತ, ಭಾಗವತ ಮುಂತಾದ ಧರ್ಮಗ್ರಂಥಗಳಿಗೆ ಮಾಸ್ಟರ್ ಇ.ಕೆ. ಆಳವಾದ ಅರ್ಥಗಳನ್ನು ವಿವರಿಸಿದರು.
ಭಗವದ್ಗೀತೆ ಒಂದು ಅಲೌಕಿಕ ದೇವಗಾನವಾಗಿದೆ. ಇದು ಶಾಶ್ವತ ಸತ್ಯವನ್ನು ತಲುಪಲು 18 ಕೀಲಿಕೈಗಳನ್ನು ಹೊಂದಿದ ಗ್ರಂಥವಾಗಿದೆ. ಭಗವಾನ್ ಮಾನವಜಾತಿಗೆ ನೇರವಾಗಿ ಉಪದೇಶಿಸಿದ ಗ್ರಂಥವಾಗಿದೆ. ಇದು ಆತ್ಮದ ಪ್ರಗತಿಯನ್ನು ಇಚ್ಛಿಸುವವರಿಗೆ ಒಂದು ದಿಕ್ಸೂಚಿ.


ಅವರು ಧರ್ಮಗ್ರಂಥಗಳ ಆಳವನ್ನು ಮಾತ್ರವಲ್ಲದೆ, ತಮ್ಮ ಅನುಯಾಯಿಗಳಿಗೆ ಆಧ್ಯಾತ್ಮಿಕ ಜ್ಯೋತಿಷ್ಯಶಾಸ್ತ್ರ, ಶಬ್ದ, ವರ್ಣ, ಸಂಖ್ಯೆ, ತಾಂತ್ರಿಕ ವಿಜ್ಞಾನ, ತಂತ್ರ, ಮಂತ್ರ ಮತ್ತು ಪ್ರಾಚ್ಯ ವಿಜ್ಞಾನ ರಮಲಗಳಂತಹ ಶಾಸ್ತ್ರಗಳನ್ನು ಕೂಡ ಬೋಧಿಸಿದರು.





ಅವರು ಪ್ರೇಮದಿಂದ, ಮತ್ತು ಸಹನಶೀಲತೆ ಯಿಂದ ಬೋಧನೆ ನೀಡಿದ್ದಾರೆ. ತಮ್ಮ ಜೀವನಶೈಲಿಯಿಂದ, ಭಗವದ್ಗೀತೆಯ ವಿಧಾನವನ್ನು ದೈನಂದಿನ ಜೀವನದಲ್ಲಿ ಅನುಷ್ಠಾನಗೊಳಿಸಬಹುದು ಎಂದು ಅವರು ಸಾಬೀತುಪಡಿಸಿದ್ದಾರೆ. ಅವರನ್ನು ಅನುಸರಿಸಿದವರಿಗೆ ಆಧ್ಯಾತ್ಮಿಕ ಜೀವನಕ್ಕೆ ಸಾಮಾಜಿಕ-ಆರ್ಥಿಕ ಮೂಲವನ್ನು ನೀಡಿದರು.



ಅವರು ಭಾರತೀಯ ಗ್ರಂಥಗಳ ಜೊತೆಗೆ ವೇದಗಳು, ಹಿಬ್ರೂ, ಮಯಾ ನಾಗರಿಕತೆಗಳ ಜ್ಞಾನ, ಬೈಬಲ್, ಜೆಂಡ್ ವೆಸ್ತಾ ಮುಂತಾದ ಗ್ರಂಥಗಳಲ್ಲಿ ಇರುವ ಜ್ಞಾನವನ್ನು ಸಮನ್ವಯಿಸಿ ಸಾವಿರಾರು ಶಿಷ್ಯರ ಜೀವನಗಳನ್ನು ಆಧ್ಯಾತ್ಮಿಕ ಪ್ರಗತಿಯ ದಿಕ್ಕಿನಲ್ಲಿ ಮುನ್ನಡೆಸಿದರು.




ಅನೇಕ ಕುಟುಂಬಗಳು ಅವರ ಉಪದೇಶಗಳಿಂದ ಆಕರ್ಷಿತವಾಗಿದ್ದು, ಅವರು ಸೂಚಿಸಿದ ಜೀವನಪಥಗಳನ್ನು ಸ್ವೀಕರಿಸಿವೆ. ಅವರಿಗೆ ಮಾಸ್ಟರವರೇ ತಾಯಿ, ತಂದೆ, ಮಾರ್ಗದರ್ಶಿ, ಗುರು, ಸ್ನೇಹಿತ, ರಕ್ಷಕರೆಂದು ಇವುಗಳೆಲ್ಲವೂ.




ತನ್ನ ಪ್ರೀತಿಯಿಂದ ಮಾಸ್ಟರ್ ರವರು ಎಲ್ಲರಿಗೂ ಬಂಧುವಾದರು. ಆರ್ಥಿಕ, ಆರೋಗ್ಯ, ವಿದ್ಯೆ, ಕುಟುಂಬ ಸಮಸ್ಯೆಗಳಂತಹ ಯಾವುದೇ ವಿಚಾರಗಳಲ್ಲಿ ಈ ಕುಟುಂಬಗಳಿಗೆ ದಾರಿ ತೋರಿಸುವ ಮನೆಯ ಹಿರಿಯರಂತೆ ಇದ್ದರು. ಅವರು ಯಾವಾಗಲೂ ಬೆಳಕು ಮಾರ್ಗದ ಕಡೆಗೆ ಮುನ್ನಡೆಸಿದರು.



ಮಾಸ್ಟರ್ ರವರಿಗೆ ಪ್ರತಿಯೊಂದು ವಿಷಯದಲ್ಲಿಯೂ ಸಂಪೂರ್ಣ ಸಹಕಾರ ನೀಡಿದವರು ಮಾಸ್ಟರ್ ರವರ ಧರ್ಮಪತ್ನಿ. ಎಲ್ಲ ಅನುಯಾಯಿಗಳನ್ನು ತಾಯಿಯಂತೆ ಆದರದಿಂದ, ಆತ್ಮೀಯ ಸ್ನೇಹದಿಂದ ಹತ್ತಿರಕ್ಕೆ ಕರೆಯುವ ಅವರನ್ನು ಎಲ್ಲಾ ಜನರು ಅಪ್ಯಾಯಿತೆಯಿಂದ "ಅಕ್ಕನವರು " ಎಂದು ಕರೆಯುತ್ತಿದ್ದರು.

ಅವರಿಗೆ ನಾಲ್ವರು ಪುತ್ರರು ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಅವರು ಸಹ ಅನಂತಾಚಾರ್ಯರ ಬಳಿ ಮಾಸ್ಟರವರು ಬೆಳೆದ ರೀತಿಯಲ್ಲೇ ತರಬೇತಿ ಪಡೆದು ಬೆಳೆದವರು. ಗುರುಗಳ ಹಾದಿಯನ್ನೇ ಅನುಸರಿಸಿ ವೇದ, ಉಪನಿಷತ್ತು, ಹೋಮಿಯೋಪತಿ, ಜ್ಯೋತಿಷ್ಯ ಮುಂತಾದವುಗಳನ್ನು ಅಧ್ಯಯನ ಮಾಡಿ ಮಾಸ್ಟರವರು ತಿಳಿಸಿದ ಯೋಗಮಾರ್ಗದಲ್ಲಿ ಜ್ಞಾನವನ್ನು ವ್ಯಾಪ್ತಿಗೊಳಿಸುತ್ತಿದ್ದಾರೆ.



ತಾವು ಅನುಸರಿಸಿದ ಆಧ್ಯಾತ್ಮಿಕ ಮಾರ್ಗವನ್ನು ವ್ಯಾಪ್ತಿಗೊಳಿಸಲು ಜಗದ್ಗುರು ಮೈತ್ರೇಯರ ನಾಮಾಂಕಿತವಾಗಿ 1971 ನವೆಂಬರ್‌ನಲ್ಲಿ **ಜಗದ್ಗುರು ಪೀಠ**ವನ್ನು ಸ್ಥಾಪಿಸಿದರು.




The World Teacher Trust
Vaisakha Valley
Visakhapatnam
The Globe Rotates

**ಜಗದ್ಗುರು ಪೀಠದ ಆಶಯಗಳು:**


- ಆಧ್ಯಾತ್ಮಿಕ ವಿದ್ಯೆಯ ಮೂಲಕ ಮಾನವರಲ್ಲಿ ಪ್ರಜ್ಞಾ ವಿಕಾಸವನ್ನುಂಟುಮಾಡುವುದು
- ವಿದ್ಯೆ, ವೈದ್ಯೆ, ಆರ್ಥಿಕ ವಿಧಾನಗಳ ಮೂಲಕ ಸೇವಾ ಸಹಕಾರಗಳನ್ನು ಒದಗಿಸುವುದು
- ಸತ್ಯದರ್ಶನಕ್ಕಾಗಿ ಸಿದ್ಧರಾಗಿದ್ದವರಿಗೆ ಆಧ್ಯಾತ್ಮಿಕ ಶಾಸ್ತ್ರದ ಜ್ಞಾನವನ್ನು ಆಚರಣೆಯ ಮೂಲಕ ಪ್ರಸಾರ ಮಾಡುವುದು
- ಜಾತಿ, ಧರ್ಮ, ಕುಲ, ಲಿಂಗ ವಿಚಕ್ಷಣೆ ಇಲ್ಲದೆ ಆಧ್ಯಾತ್ಮಿಕ ವಿದ್ಯೆಯನ್ನು ಉಪದೇಶಿಸುವುದು


ಪ್ರಬೋಧನೆ ಮತ್ತು ಚಿಕಿತ್ಸೆಯ ಕ್ಷೇತ್ರಗಳಲ್ಲಿ ಅವರ ಸೇವೆಯ ಅವಶ್ಯಕತೆ ಬಹಳಷ್ಟು ಹೆಚ್ಚಾಗಿದ್ದರಿಂದ, ಮಾಸ್ಟರ್ ಅವರು ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿ, ಮಾನವತೆಗೆ ಸೇವೆಸಲ್ಲಿಸುವ ಮಹೋನ್ನತ ಉದ್ದೇಶದೊಂದಿಗೆ ಮುಂದೆ ಸಾಗಿದರು.

ಮಾಸ್ಟರವರ ಬೋಧನೆಗಳಿಂದ ಪ್ರಭಾವಿತರಾದ ಶ್ರೀ ಆಲ್ಬರ್ಟ್ ಶಶಿ ವಿಶಾಖಪಟ್ಟಣಕ್ಕೆ ಹಲವಾರು ಬಾರಿ ಭೇಟಿ ನೀಡಿದರು. ಹೊರ ದೇಶಗಳಿಗೆ ಬಂದು ಈ ಜ್ಞಾನವನ್ನು ತಮ್ಮ ಗುಂಪುಗಳಿಗೂ ಕಲಿಸುವಂತೆ ಅವರು ಮಾಸ್ಟರವರಿಗೆ ಪದೇ ಪದೇ ವಿನಂತಿಸುತ್ತಿದ್ದರು.





ಅವರ ಆಹ್ವಾನವನ್ನು ಮನ್ನಿಸಿ, ಪವಿತ್ರ ಪ್ರಾಕ್ ಪಶ್ಚಿಮ ಸಮನ್ವಯ ಯಜ್ಞದ ಅಂಗವಾಗಿ, ಮಾಸ್ಟರ್ ಇ.ಕೆ. 22 ಏಪ್ರಿಲ್ 1972 ರಂದು ಬೆಲ್ಜಿಯಂಗೆ ಮೊದಲ ಬಾರಿ ಪಯಣಿಸಿದರು.. ಈ 2 ತಿಂಗಳ ಪ್ರವಾಸದಲ್ಲಿ ಸ್ವಿಟ್ಜರ್ಲೆಂಡ್, ಇಟಲಿ, ಫ್ರಾನ್ಸ್ ಮತ್ತು ಹಾಲೆಂಡ್‌ನಲ್ಲಿ ಜ್ಞಾನ, ಜ್ಯೋತಿಷ್ಯ, ಪುನರ್ಜನ್ಮ, ಧ್ಯಾನ, ಮಾನವ ವಿಜ್ಞಾನ ಮತ್ತು ಭಗವದ್ಗೀತೆಯಂತಹ ವಿವಿಧ ವಿಷಯಗಳ ಕುರಿತು ಉಪನ್ಯಾಸಗಳು ಮತ್ತು ಸಮ್ಮೇಳನಗಳನ್ನು  ನಡೆಸಿದರು.






ದಿವ್ಯಜ್ಞಾನ ಸಮಾಜದ ಅನೇಕ ಸದಸ್ಯರು ಮತ್ತು ಶ್ರೀ ಆಲ್ಬರ್ಟ್ ಶಶಿಯವರ ಅನುಯಾಯಿಗಳು ಆ ಸಮ್ಮೇಳನಗಳಲ್ಲಿ ಭಾಗವಹಿಸಿ ಯೋಗ ಮತ್ತು ಆಧ್ಯಾತ್ಮಿಕ ವಿಷಯಗಳ ಬಗ್ಗೆ ತಮ್ಮ ಸಂದೇಹಗಳಿಗೆ ಸಮಾಧಾನಗಳನ್ನು ಪಡೆದರು.




ಅವರ ಬೋಧನೆಗಳನ್ನು ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೆ ಏಕಕಾಲದಲ್ಲಿ ಅನುವಾದಿಸಿದಾಗ ಪ್ರೇಕ್ಷಕರು ಮಂತ್ರಮುಗ್ಧರಾದರು. ಅವರ ನಗು ಆಯಸ್ಕಾಂತೀಯ ಅಲೆಗಳನ್ನು ಹೊರಸೂಸುತ್ತಿತ್ತು ಮತ್ತು ಬೋಧಿಸುವಾಗ ಅವರ ಪ್ರಕಾಶಮಾನವಾದ ನೋಟವು ಕೇಳುಗರನ್ನು ಆನಂದ ಸ್ಥಿತಿಗೆ ಕೊಂಡೊಯ್ಯುತ್ತಿದ್ದವು.




ಅವರಲ್ಲಿ ಅನೇಕರು ಮೇಡಮ್ ಬ್ಲಾವೆಟ್ಸ್ಕಿ ಮತ್ತು ಜ್ವಾಲಾಕೂಲ್ ಮಹರ್ಷಿ ಅವರ ಕೃತಿಗಳನ್ನು ಓದಿದ್ದಾರೆ. ಮಾಸ್ಟರ್ ಇ.ಕೆ., ತಮ್ಮ ಸಮನ್ವಯ ವಿಧಾನದೊಂದಿಗೆ, ದಿವ್ಯಜ್ಞಾನವನ್ನು ಪ್ರಾಯೋಗಿಕ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸುಲಭವಾದ ಮಾರ್ಗವನ್ನು ಒದಗಿಸಿದ್ದಾರೆ. ಗುರುಗಳ ಬೋಧನೆ, ಜೀವನ ವಿಧಾನ ಮತ್ತು ಸಂಭಾಷಣೆಗಳನ್ನು ನೋಡಿ, ಭೌತಿಕ ಕಕ್ಷೆಯಲ್ಲಿ ಪರಮಗುರು ಪರಂಪರೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನೇರವಾಗಿ ತಿಳಿದುಕೊಳ್ಳಲು ಅವರಿಗೆ ಸಾಧ್ಯವಾಯಿತು .




ಮಾಸ್ಟರ್ ರವರ ಸನಿಹಕ್ಕೆ ಬಂದವರೆಲ್ಲ ತಮಗೂ ಮತ್ತು ಮಾಸ್ಟರವರ ಮಾರ್ಗಕ್ಕೂ ನಡುವೆ ಬಲವಾದ ಬಾಂಧವ್ಯ ಬೆಳೆಸಿಕೊಂಡರು. ಅವರು ಮಾಸ್ಟರವರಿಂದ ಬರುವ ಬೋಧನೆಗಳನ್ನು ಅಧ್ಯಯನ ಮಾಡಿ, ಮತ್ತು ಮಾರ್ಗದರ್ಶನಕ್ಕಾಗಿ ಮಾಸ್ಟರ ವರಿಗೆ ಪತ್ರಗಳು ಮತ್ತು ದೂರವಾಣಿಗಳ ಮೂಲಕ ಮಾತಾಡುತ್ತಿದ್ದರು.




ಪಾಶ್ಚಾತ್ಯರ ಕೋರಿಕೆಯ ಮೇರೆಗೆ, ಮಾಸ್ಟರ್ ರವರು 1972-1983 ರ ನಡುವೆ  ಪ್ರಾಕ್-ಪಶ್ಚಿಮ ಸಮನ್ವಯ ಪ್ರವಾಸಗಳನ್ನು ಮಾಡಿದರು.




ಸತ್ಯಾನ್ವೇಷಕರಿಗಾಗಿ ಮಾಸ್ಟರ್‌ನಿಂದ  80 ಕ್ಕೂ ಹೆಚ್ಚು ಕೃತಿಗಳು  ಹೊರಬಂದವು.. ಭಾಗವತವು ರಹಸ್ಯ ಪ್ರಕಾಶ, ವೇದಗಳ ವ್ಯಾಖ್ಯಾನಗಳು, ಜ್ಯೋತಿಷ್ಯ, ಹೋಮಿಯೋ ಪತಿ, ಶ್ರೀಕೃಷ್ಣನ ಜೀವನದ ಕಾದಂಬರಿಗಳು, ಪತಂಜಲಿಯ ಯೋಗ ಸೂತ್ರಗಳು ಇತ್ಯಾದಿ ಗಳ ಆಳವಾದ  ಜ್ಞಾನ ವನ್ನು ನೀಡಿತು.ಅವರ ಕೃತಿಗಳು ವಿಶ್ವ ಭಾಷೆ ಗಳಿಗೆ ಅನುವಾದಿಸ ಲಾಗಿವೆ ಮತ್ತು ಆತ್ಮ ಜ್ಞಾನವನ್ನು ಪಡೆಯಲು ಸಹಾಯ ಮಾಡುತ್ತಿವೆ.





ಶ್ರೀಮಂತರು, ಬಡವರು, ವಿದೇಶೀಯರು, ಹಳ್ಳಿ ಜನರು ಎಂಬ ಭೇದಭಾವವಿಲ್ಲದೆ ಕಲೆ ಮತ್ತು ಜಿಜ್ಞಾಸೆಯಿಂದ ಎಲ್ಲಿಗೆ ಕರೆದರೂ ಅಲ್ಲಿಗೆ ಹೋಗಿ ಮಾರ್ಗದರ್ಶನ ಮಾಡುತ್ತಿದ್ದರು. ಹಾಗೆ ಅನಂತಪುರ, ಹೈದರಾಬಾದ್, ರಾಜಮಂಡ್ರಿ, ಚೆನ್ನಪಟ್ಟಣ, ಗುಂಟೂರು ಮೊದಲಾದ ನಗರಗಳಲ್ಲದೆ  ಪಾಡೇರು, ಪಾಕಲಪಾಡು ಮುಂತಾದ ಗ್ರಾಮಗಳಲ್ಲಿಯೂ ಚೈತನ್ಯದೀಪ್ತಿಯನ್ನುಂಟು ಮಾಡಿದರು.



ತನ್ನನ್ನು ಅನುಸರಿಸುವವರು ಸ್ವಾವಲಂಬಿಯಾಗಿರಬೇಕು ಎಂದು ಯುವಕರನ್ನು ಪ್ರೋತ್ಸಹಿಸಿ, ಸ್ವಯಂ ಉಪಾಧಿಯೋಜನೆಗಳನ್ನು ರೂಪಿಸಿ, ಕುಟೀರ್ ಇಂಡಸ್ಟ್ರೀಸ್, ಎಕ್ವೇರಿಯನ್ ಪ್ರಿಂಟಿಂಗ್ ಸ್ಕೂಲ್, ವಾಣಿ ಪ್ರಿಂಟರ್ಸ್ ಮೊದಲಾದ ಸಂಸ್ಥೆಗಳನ್ನು ಏರ್ಪಡಿಸಿ ಜೀವನಾಧಾರವನ್ನು ಕಲ್ಪಿಸದರು.




ಮಾಸ್ಟರವರನ್ನು ಅನುಸರಿಸಿದವರಲ್ಲಿ ಉದ್ಯೋಗಿಗಳು, ವ್ಯಾಪಾರಿಗಳು, ವೈದ್ಯರು, ಎಂಜಿನಿಯರ್ಗಳು, ವಕೀಲರು, ಶಿಕ್ಷಕರು, ವಿದ್ಯಾರ್ಥಿಗಳು, ದೊಡ್ಡ ಕಂಪನಿಗಳ ಮುಖ್ಯಸ್ಥರು, ಸರ್ಕಾರಿ ಅಧಿಕಾರಿಗಳು ಇತ್ಯಾದಿ ಎಲ್ಲರೂ ಇರುತ್ತಿದ್ದರು.. ಅವರೆಲ್ಲರೂ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮತ್ತು ಸೇವಾ ಮನೋಭಾವದಿಂದ ನಿರ್ವಹಿಸಲು ಅವರನ್ನು ಸತ್ಪ್ರಯೋಜಕರಾಗಿ, ಸಮಾಜ ಸೇವಕರಾಗಿ ತರಬೇತಿ ಪಡೆದಿದ್ದಾರೆ.





ಒಳ್ಳೆಯದನ್ನು ಮಾಡುವುದಕ್ಕಿಂತ ಮಾಡಿಸಲು ಹೆಚ್ಚಿನ ಸಾಮರ್ಥ್ಯ ಬೇಕಾಗು ತ್ತದೆ. ನೀವು ಅಭ್ಯಾಸ ಮಾಡದಿದ್ದರೆ, ನೀವು ಅದನ್ನು ಮಾಡಿಸಲು ಸಾಧ್ಯವಾಗುವು ದಿಲ್ಲ.

ವಿದ್ಯೆ, ವೈದ್ಯ ಮತ್ತು ವ್ಯವಹಾರಗಳು ವ್ಯಾಪಾರ ವಸ್ತುಗಳಾಗಿದ್ದು, ಅದರ ಗುಣಮಟ್ಟ ಕುಸಿಯುತ್ತಿರುವುದನ್ನು ಗಮನಿಸಿದ ಮಾಸ್ಟರ್, ಆದರ್ಶಮಯ ವಿದ್ಯಾ ಯೋಜನೆ ಯೊಂದಿಗೆ, ಮನೆಯೆ ಮಕ್ಕಳಿಗೆ ಮೊದಲ ಪಾಠಶಾಲೆಯೆಂದು ಘೋಷಿಸಿದರು. ತಾಯಿ-ತಂದೆಗಳು ಮಕ್ಕಳಿಗೆ ಬೋಧಿಸಬೇಕಾದ ವಿದ್ಯಾ ಜ್ಞಾನಗಳು ಮತ್ತು ಸಂಸ್ಕಾರಗಳು ಅವರ ಬೆಳವಣಿಗೆಯನ್ನು ಉತ್ತೇಜಿಸಬೇಕೆಂದು ಅವರು ನಿರ್ಧರಿಸಿದರು. ಈ ದೃಷ್ಟಿಕೋಣದಿಂದ, ಜನಕುಲಂ ಮತ್ತು ಬಾಲ ಭಾನು ವಿದ್ಯಾಲಯ ಮುಂತಾದವುಗಳನ್ನು ಪ್ರಾರಂಭಿಸಿದರು.





ಮಾಸ್ಟರ್ ಇಕೆ ಸಮಾಜ ಸುಧಾರಕರಾಗಿದ್ದರು. ಷೋಡಶೋಪಚಾರ ಪೂಜೆ, ಹೋಮ, ಅಭಿಷೇಕಗಳನ್ನು ಜಾತಿ, ಮತ, ಧರ್ಮಗಳ ಭೇದವಿಲ್ಲದೆ ಎಲ್ಲರಿಗೂ ಸತ್ಸಂಸಂಕಲ್ಪ ಮಾತ್ರ ಮುಖ್ಯ ಎಂದು ಬೋಧಿಸಿದರು. ಗುರುಪೂಜಾ ಮಹೋತ್ಸವದಲ್ಲಿ ಅನ್ನಪ್ರಾಶನ, ಅಕ್ಷರಾಭ್ಯಾಸ, ಉಪನಯನ, ವಿವಾಹ ಮೊದಲಾದ ಸಂಸ್ಕಾರಗಳನ್ನು, ಕ್ರತುಗಳನ್ನು ನೆರವೇರಿಸಿ ಎಲ್ಲ ಸಮುದಾಯದವರಿಗೂ ಮಾರ್ಗದರ್ಶನ ನೀಡಿದರು.





ರೋಗಿಗಳಿಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಒದಗಿಸಲು ನಿಸ್ವಾರ್ಥದಿಂದ ವೈದ್ಯ್ ಸೇವೆ ಮಾಡಲು ಮತ್ತು ಸಾಮಾನ್ಯ ಜನರಿಗೆ ಉತ್ತಮ ಚಿಕಿತ್ಸೆ ಲಭ್ಯವಾಗುವಂತೆ ಉಚಿತ ಹೋಮಿಯೋ ಚಿಕಿತ್ಸಾಲಯಗಳನ್ನು ಸ್ಥಾಪಿಸಿದರು.. ಇಂದಿಗೂ ಪ್ರಪಂಚದಾದ್ಯಂತ ನೂರಾರು ಮಾಸ್ಟರ್ ಹೋಮಿಯೋ ವೈದ್ಯಾಲಯಗಳಿದ್ದು, ಅಗತ್ಯವಿರುವವರಿಗೆ ಉಚಿತ ಸೇವೆಗಳನ್ನು ಒದಗಿಸುತ್ತಿವೆ.




ಯಾರಿಗೆ ಯಾರು ? ಎಂದಲ್ಲದೆ  ಎಲ್ಲರೂ ಪರಸ್ಪರ ಸಹಾಯ ಮಾಡಿಕೊಳ್ಳುತ್ತಾ  ಬೃಂದ ಜೀವನದಲ್ಲಿ ನಿಜವಾದ ಸಾಧನೆ ಮತ್ತು ಆನಂದವಿದೆ ಎಂದು ಶ್ರೀಕೃಷ್ಣನು ಆಚರಿಸಿ ತೋರಿಸಿದ  ಬೃಂದಾವನ ಯೋಜನೆಯ ಸವಿಯನ್ನು ಸಾರುವ ಗುರುಪೂಜಾ ಮಹೋತ್ಸವಗಳನ್ನು ಆಯೋಜಿಸಲಾಗಿತ್ತು. ನೂರಾರು ಮಂದಿಗೆ ವಸತಿ, ಊಟದ ವ್ಯವಸ್ಥೆ, ಗುರುಪೂಜಾವೇದಿಕೆ, ಹೂವಿನ ಹಾರ ತಯಾರಿಸುವುದು ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತಿದ್ದ ಕಾರ್ಯಕರ್ತರನ್ನು ಕಂಡು ಸ್ಫೂರ್ತಿಗೊಂಡು ಎಷ್ಟೋ ಜನ ತಮ್ಮ ಕೈಲಾದಷ್ಟು  ಸಹಾಯ ಮಾಡತೊಡಗಿದರು.




ಮಾಸ್ಟರ್ ಇ.ಕೆ.ಯವರು  ಅನೇಕ ಶಿಷ್ಯರಿಗೆ ವೇದಗಳು, ಯೋಗ, ಹೋಮಿಯೋಪತಿ, ಜ್ಯೋತಿಷ್ಯ, ಸಂಸ್ಕೃತ, ಯೋಗಾಸನಗಳು, ವಿಶ್ವ ಗ್ರಂಥಗಳು ಇತ್ಯಾದಿಗಳಲ್ಲಿ ತರಬೇತಿ ನೀಡಲಾಯಿತು.




ಅವರ ಸ್ಫೂರ್ತಿಯಿಂದ, ಧ್ಯಾನ, ಸ್ವಾಧ್ಯಾಯ, ಸ್ವಾವಲಂಬನೆ ಮತ್ತು ಇತರರಿಗೆ ಸೇವೆ ಎಂಬ ತತ್ವಗಳ ಆಧಾರದ ಮೇಲೆ ಅನೇಕ ಕೇಂದ್ರಗಳನ್ನು ಸ್ಥಾಪಿಸಲಾಯಿತು ಮತ್ತು ಯೋಗ ಮಾರ್ಗವನ್ನು ಹರಡಲಾಯಿತು.





ಮಾಸ್ಟರ್ ಶಕುನಗಳು, ಪ್ರಶ್ನೆ, ಹಸ್ತಸಾಮುದ್ರಿಕ ಮತ್ತು ವಾಸ್ತು ಮುಂತಾದ ವಿದ್ಯೆಗಳಲ್ಲಿ ನಿಪುಣರು.ಪೂರ್ವ ಮತ್ತು ಪಶ್ಚಿಮ ಹೋರಾಶಾಸ್ತ್ರಗಳನ್ನು ಸಮನ್ವಯಗೊಳಿಸಿ, ಮೂರು ದಶಕಗಳಿಗಿಂತ ಹೆಚ್ಚು ಕಾಲ, ನೂರಾರು ವಿದ್ಯಾರ್ಥಿಗಳಿಗೆಬೋಧಿಸಿದರು.


ಜ್ಯೋತಿಷ್ಯವನ್ನು ಕರ್ತವ್ಯ ನಿರ್ವಹಣೆಗೆ ಮತ್ತು ಸದುಪಯೋಗಕ್ಕಾಗಿ ಮಾರ್ಗದರ್ಶಿಯಾಗಿ ಹೇಗೆ ಅಧ್ಯಯನ ಮಾಡಬಹುದೋ ಎಂಬು ದನ್ನು ಅವರು ಬೋಧಿಸಿದರು. ಏವರನ್ನಾದರೂ ಒಮ್ಮೆ ನೋಡಿದ ಮಾತ್ರಕ್ಕೆ ಅವರ ಭೂತ-ಭವಿಷ್ಯಗಳನ್ನು ಕ್ಷಣಾರ್ಧದಲ್ಲಿ ಗ್ರಹಿಸಲು ಸಮರ್ಥರು. ಕಲವರ ಅನುಯಾಯಿಗಳ ಮನವಿಯ ಮೇರೆಗೆ, ಜಾತಕದ ಪ್ರಕಾರ ಪರಿಹಾರವನ್ನು ನೀಡುತ್ತಿದ್ದರು.

ಮಾಸ್ಟರವರು ತೋರಿದ ದಾರಿಯತ್ತ ಗಮನಹರಿಸದೆ, ಅವರು ಕಾರಣಜನ್ಮರು. ಆದ್ದರಿಂದಲೇ ಇಂತಹ ಕಾರ್ಯಕ್ರಮಗಳನ್ನು ಮಾಡಬಲ್ಲರು ಎಂದು ಕೆಲವರು ಭಾವಿಸಿತ್ತಿದ್ದರೆ.


1976ರಲ್ಲಿ ಮಾಸ್ಟರವರ ಜನ್ಮದಿನದ ಸುವರ್ಣ ಮಹೋತ್ಸವ ಆಚರಣೆಯನ್ನು ದೇಶವಿದೇಶಗಳಿಂದ ಬಂದಿರುವ ಅನುಚರರಿಂದ ಅತ್ಯಂತ ವಿಜೃಂಭಣೆಯಿಂದ ನಡೆಸಲಾಯಿತು.







ಮಾಸ್ಟರ್ ಒಬ್ಬ ವಿನಯಶೀಲ ಪುತ್ರ, ಆತ್ಮೀಯತೆಯನ್ನು ಹಂಚುವ ಸಹೋದರ, ಪ್ರೇಮತತ್ತ್ವದ ಜೀವಂತ ರೂಪವಾಗಿರುವ ಜೀವನಸಂಗಾತಿ, ಆದರ್ಶಮಯ ತಂದೆ, ಆಚಾರಣದ ಮೂಲಕ ಸ್ಫೂರ್ತಿಯನ್ನು ನೀಡಿ ದಾರಿ ತೋರಿಸುವ ಗುರು, ತಾಯಿಯ ಪ್ರೀತಿಯಿಂದ ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸಿದ ಧನ್ವಂತರಿ, ಯುಗಪ್ರಬೋಧಕ, ಎಲ್ಲ ಯುಗಗಳಿಗೆ ಪ್ರವಕ್ತರು.



ಮಾಸ್ಟರ್ ಇ.ಕೆ. ಯವರು 1984ರ ಫೆಬ್ರುವರಿಯಲ್ಲಿ ಮೋತುಗೂಡೆಂ ಎಂಬ ದೂರದ ಅರಣ್ಯ ಪ್ರದೇಶದಲ್ಲಿ ಒಂದು ತಿಂಗಳ ಕಾಲ ಯೋಗ ಶಿಕ್ಷಣಾ ತರಗತಿಗಳನ್ನು ನಡೆಸಿದರು.. ತರಬೇತಿ ತರಗತಿಗಳ ಕೊನೆಯ ವಾರದಲ್ಲಿ, ಮಾಸ್ಟರ್ ಮತ್ತು ಇತರ ಕೆಲವು ಸಹೋದರರು ಮಲೇರಿಯಾಕ್ಕೆ ತುತ್ತಾದರು.



ಮಲೇರಿಯಾ ಜ್ವರ ಉಲ್ಬಣಗೊಂಡಿತು ಮತ್ತು ಮಾಸ್ಟರ್ ಇ.ಕೆ ಅವರ ಆರೋಗ್ಯವು ಹದಗೆಟ್ಟಿತು. 1984 ರ ಮಾರ್ಚ್ 17 ರಂದು ಫಾಲ್ಗುಣ ಹುಣ್ಣಿಮೆಯ ದಿನದಂದು ನಿಧನರಾದರು. 30 ವರ್ಷಗಳಿಂದ ದಣಿವಾರದೆ ಬೋಧನೆ, ಚಿಕಿತ್ಸೆ, ಯೋಗ, ಬರವಣಿಗೆ, ದೈವಿಕ ಯೋಜನೆಗೆ ಅನುಗುಣವಾಗಿ ಜನರ ಜೀವನವನ್ನು ರೂಪಿಸುವ ಅವರ ಜೀವನವು ಸಾಧಕರನ್ನು ಪ್ರೇರೇಪಿಸುತ್ತದೆ ಮತ್ತು ಅವರ ರಚನೆಗಳ ಮೂಲಕ ಅವರ ಸಾನ್ನಿಧ್ಯವನ್ನು ಒದಗಿಸುತ್ತಿದೆ.



ಭುಕ್ತಿ ಮುಕ್ತಿ ಪ್ರದಾತೇನ ತಸ್ಮೈ ಶ್ರೀಗುರವೇ ನಮಃ



ನಾನು ಧ್ಯಾನದಲ್ಲಿ ನಿಮಗೆ ಲಭ್ಯನಾಗಿರುತ್ತೇನೆ. ನಾನು ಎಲ್ಲಿದ್ದರೂ, ಅಗತ್ಯವೆಂದು ಭಾವಿಸಿದಾಗ ನನ್ನ ದರ್ಶನವು ದೊರಕುವುದು ನಿಜ. ನನ್ನಲ್ಲಿ ಸಂಪೂರ್ಣ ಸಮರ್ಪಣೆಯಾದವರಿಗೆ ಇದು ಸದಾ ಅನುಭವವಾಗಿರುತ್ತದೆ.

ನನ್ನ ಫೋಟೋ ಎದುರು ಕುಳಿತು ಮನಸ್ಸಿನಿಂದ ಹೇಳಿದರೆ, ಅಗತ್ಯವಾದ ಸೌಕರ್ಯ ಮತ್ತು ಸಮಾಧಾನ  ದೊರಕುತ್ತದೆ.

- ಶ್ರೀಮಾನ್ ಕುಲಪತಿ. ಎಕ್ಕಿರಾಲ ಕೃಷ್ಣಮಾಚಾರ್ಯ
(ಪ್ರೇಮಲೇಖಗಳು ಗ್ರಂಥದಿಂದ)

# ಆಲೋಚಿಸಿ ಮತ್ತು ಪ್ರತಿಕ್ರಿಯಿಸಿ: ಕಥೆಗಳ ಮೂಲಕ ಪಾಠಗಳು

ಕಥೆಗಳು ಕೇವಲ ವಿನೋದಕ್ಕಿಂತ ಹೆಚ್ಚು ತರಬಹುದಾದಂತೆ ಮಾಡುವುದಕ್ಕಾಗಿ, ನಾವು ಅಧ್ಯಯನವನ್ನು ಗಾಢವಾಗಿಸಲು ಪರಿಗಣನಾ ಮತ್ತು ಸಂವಾದಾತ್ಮಕ ಅಂಶಗಳನ್ನು ಪರಿಚಯಿಸುತ್ತಿದ್ದೇವೆ. ಕಥೆಯಿಂದ ಪ್ರಮುಖ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಚರ್ಚಾ ಪ್ರಶ್ನೆಗಳು, ಚಿಂತನೆ ಪ್ರಾರಂಭಿಸುವ ಕ್ರಿಯಾತ್ಮಕ ಚಟುವಟಿಕೆಗಳನ್ನು ಸೇರಿಸಿ, ನಾವು ಪಾಠಕರನ್ನು ಕಥೆಗೆ ವೈಯಕ್ತಿಕವಾಗಿ ಸಂಪರ್ಕಿಸಲು ಉತ್ತೇಜನ ನೀಡುತ್ತೇವೆ. ಕುಟುಂಬ ಅಥವಾ ಗುಂಪು ಚರ್ಚೆಗಳನ್ನು ಉತ್ತೇಜನ ನೀಡುವುದರಿಂದ ಕಥೆಯನ್ನು ಹಂಚಿಕೊಳ್ಳುವ ಅನುಭವವಾಗಿ ಮಾರ್ಪಡಿಸಲು ಸಹಾಯವಾಗುತ್ತದೆ, ಮತ್ತು ಇದು ಆಳವಾದ ಆಲೋಚನೆ ಹಾಗೂ ಅರಿವುಗಳನ್ನು ಉತ್ತೇಜಿಸುತ್ತದೆ.

ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.

1. ದಿವ್ಯಜ್ಞಾನವೆಂದರೆ ಏನು?

.................................................................................................... ( ಪುಟ 7)

2. ಸತ್ಯಾನ್ವೇಷಕರೆಲ್ಲರಿಗೂ ಶಿಸ್ತಿಗಾಗಿ ಅನುಸರಿಸುವ ಪ್ರಾಥಮಿಕ ಮೂರು ನಿಯಮಗಳು ಏನು?

.................................................................................................... ( ಪುಟ 12)

3. ಯಾವುದರ ಮೂಲಕ ನಾವು ನಮ್ಮೊಳಗೆ ವಿಕಸಿತವಾಗಿ ಉತ್ತಮ ವ್ಯಕ್ತಿಗಳಾಗುತ್ತೇವೆ?

.................................................................................................... (ಪುಟ 18)

4. ಒಳ್ಳೆಯ ಕೆಲಸಗಳನ್ನು ಮಾಡುವು ಸುಳುವು ಯಾವುದು?

.................................................................................................... (ಪುಟ 22)

5. ಬಿಟ್ಟ ಸ್ಥಳಗಳನ್ನು ತುಂಬಿರಿ.

ಒಳ್ಳೆಯದನ್ನು ____ ದಕ್ಕಿಂತ _____ ಲು ಹೆಚ್ಚಿನ ಸಾಮರ್ಥ್ಯ ಬೇಕಾಗು ತ್ತದೆ.
ನೀವು________________ಸಾಧ್ಯವಾಗುವು ದಿಲ್ಲ.

.................................................................................................... (ಪುಟ 26)

ಗುರುಪೂಜೆಯಲ್ಲಿ ಭಾಗವಹಿಸುವುದರಿಂದ ನಾವು ಏನು ಏನು ಕಲಿಯಬಹುದು ಎನ್ನುವ **ಅಂಶ**ವನ್ನು ಸಂಕ್ಷಿಪ್ತವಾಗಿ (6 ವಾಕ್ಯಗಳನ್ನು ಮೀರದೆ) ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಣೆ ನೀಡಿ.

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

ಈ ಪುಸ್ತಕದಲ್ಲಿ ನೀವು ಅರ್ಥಮಾಡಿಕೊಳ್ಳದ ಅಥವಾ ಸ್ಪಷ್ಟತೆ ಅಗತ್ಯವಿರುವ ಯಾವುದೇ ಅಂಶಗಳು ಇದ್ದರೆ, ದಯವಿಟ್ಟು ಕೆಳಗಿನ ಇಮೇಲ್ ವಿಳಾಸಕ್ಕೆ ನಿಮ್ಮ ಪ್ರಶ್ನೆಗಳು ಅಥವಾ ಸಲಹೆಗಳು ಕಳುಹಿಸಬಹುದು. **storybooks.feedback@gmail.com**

# <u>ಮಾಸ್ಟರ್ ಇ.ಕೆ</u>


ಮಾಸ್ಟರ್ ಇ.ಕೆ. ಜೀವನದ ಪ್ರತಿಯೊಂದು ರಂಗದಲ್ಲೂ ದೈವತ್ವವನ್ನು ಪ್ರದರ್ಶಿಸಿದ ನವಯುಗ ಶಿಕ್ಷಕ.


ಅವರು ವೈದ್ಯ, ಜವಾಬ್ದಾರಿಯುತ ಗೃಹಸ್ಥ, ಉತ್ತಮ ಸ್ನೇಹಿತ, ಮಾರ್ಗದರ್ಶಕ ಮತ್ತು ತತ್ವಜ್ಞಾನಿ. ಅವರು ಹೊಂದಾಣಿಕೆಯನ್ನು ಕಲಿಸಿದರು. ಅವರು ಸಾಮರಸ್ಯದ ಸರಳ ಮಾರ್ಗವನ್ನು ನೀಡಿದರು. ಅವರ ಜೀವನ ಮತ್ತು ಬೋಧನೆಗಳು ಪೂರ್ವ ಮತ್ತು ಪಶ್ಚಿಮದಲ್ಲಿ ಸತ್ಯದ ಹಾದಿಯಲ್ಲಿ ಅನೇಕರನ್ನು ಪ್ರಚೋದಿಸಿತು ಮತ್ತು ಜಾಗೃತಗೊಳಿಸಿತು.

ಈ ಪುಸ್ತಕವು ಮಾಸ್ಟರ್ ಅವರ ಜೀವನ ಮತ್ತು ಕೃತಿಗಳ ಒಂದು ನೋಟವನ್ನು ಒಳಗೊಂಡಿದೆ.

---

## <u>ಈ ಸರಣಿಯಲ್ಲಿ  ಮುಂಬರುವ ಪುಸ್ತಕಗಳು</u>




ದ ವರ್ಲ್ಡ್ ಟೀಚರ್ ಟ್ರಸ್ಟ್ - ಗ್ಲೋಬಲ್, ಸ್ವಿಟ್ಜರ್ಲ್ಯಾಂಡ್